ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು ; ಋಷಿಗಳು ನಮ್ಮ ಮಾರ್ಗದರ್ಶಿಗಳು

# ತಪೋವಾಣಿ

ಸಂಪುಟ 19 ಸಂಚಿಕೆ 02 ಫೆಬ್ರವರಿ 2022 (Kannada Monthly) ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಜನವರಿ 1998ರ ಸಂಚಿಕೆ)

"ನೀವು ಸಾಧನೆಯಲ್ಲಿ ಯಾವ ಒಂದು ಅಂಶಕ್ಕೆ ಒತ್ತು ನೀಡುವಿರಿ?" ಎಂದು ಯಾರಾದರೂ ನನ್ನನ್ನು ಕೇಳಿದರೆ ನಾನು ಹಿಂದೆ ಮುಂದೆ ನೋಡದೆ 'ಅನುಭವ' ಎಂದು ಹೇಳುತ್ತೇನೆ. ಅನುಭವ ಎಂದರೆ ದರ್ಶನಗಳು, ಸೂಕ್ಷ್ಮಯಾನ ಅಥವಾ ಕುಂಡಲಿನಿ ಮೇಲಕ್ಕೇರುವುದು ಎಂದು ನಾನು ಹೇಳುತ್ತಿಲ್ಲ. ಅದೆಂದರೆ ದೇವರನ್ನು ಅನುಭವಿಸುವುದು; ದೇವರನ್ನು ಸಮಾಧಿಯ ವಿವಿಧ ಹಂತಗಳಲ್ಲಿ ಅನಂತನಾಗಿ, ಏಕಮಾತ್ರನಾಗಿ, ಬೆಳಕಾಗಿ, ಶಕ್ತಿಯಾಗಿ ಅಥವಾ ಆನಂದವಾಗಿ ಅನುಭವಿಸುವುದು. ಸಮಾಧಿಯನ್ನು ಅನುಭವಿಸುವುದು ಸುಲಭವೇನಲ್ಲ. ಆದರೆ ಅದು ಸಾಧ್ಯ ಎಂದು ನನಗೆ ತಿಳಿದಿದೆ. ಪ್ರಾಮಾಣಿಕ ಪ್ರಯತ್ನಗಳು ಮತ್ತು ಉನ್ನತ ಮಟ್ಟದ ತಂತ್ರಗಳಿಂದ ನಾವು ಒಂದು ವರ್ಷದಲ್ಲಿ ಸಮಾಧಿಯ ಅಂಚನ್ನು ತಲುಪಬಹುದು. ನಂತರ ಸಮಾಧಿ ಯೋಗದಲ್ಲಿ ನಿರಂತರ ಮತ್ತು ತೀವ್ರವಾದ ಧ್ಯಾನಗಳಿಂದ ಆಳವಾದ ಮೌನದಲ್ಲಿ ನಾವು ಸಮಾಧಿಯನ್ನು ಕ್ಷಣಗಳಲ್ಲಿ ಅನುಭವಿಸಬಹುದು, ಅದು ಆಗಾಗ್ಗೆ ಅಲ್ಲದಿದ್ದರೂ. ನಮ್ಮಲ್ಲಿ ಶಾಶ್ವತ ಬದಲಾವಣೆಗಳನ್ನು ತರಲು ಈ ಸಂಕ್ಷಿಪ್ತ ಕ್ಷಣಗಳೂ ಸಾಕು.

ನಾನು ಈ ಅನುಭವಕ್ಕೆ ಒತ್ತು ನೀಡುತ್ತೇನೆ ಏಕೆಂದರೆ ನಾವು ನಿಜವಾಗಿ ಅನುಭವಿಸಿದಾಗ ಮಾತ್ರ ದೈವತ್ವಕ್ಕೇರುತ್ತೇವೆ. ಆಗ ಮಾತ್ರ ನಮ್ಮಲ್ಲಿ ಉದಾತ್ತೀಕರಣ (sublimation) ಮತ್ತು ಪರಿವರ್ತನೆಯ ಪ್ರಕ್ರಿಯೆಗಳು ಆರಂಭವಾಗುತ್ತವೆ. ಹಾಗೂ ಅಲ್ಲಿಯವರೆಗೆ ಕೇವಲ ಆಲೋಚನೆಗಳು ಮತ್ತು ಆಶಯಗಳು ಮಾತ್ರ ಇರುತ್ತವೆ.

ಇದನ್ನು ಅರಿತುಕೊಳ್ಳಲು ಐವತ್ತು ವರ್ಷ ಬೇಕಾಯಿತು. ಈ ಮೂರು ವರ್ಷಗಳಲ್ಲಿ ತಪೋನಗರದಲ್ಲಿ ನಾನು ಮಾಡಿದ ಸಾಧನೆಯೇ ದ್ವಾರಗಳನ್ನು ತೆರೆಯಲು ಕಾರಣವಾಯಿತು. ನನ್ನ ಸುತ್ತಲಿರುವವರೆಲ್ಲರೂ ದ್ವಾರಗಳನ್ನು ಕಂಡುಕೊಳ್ಳಬೇಕೆಂದು ನಾನು ಬಯಸುತ್ತೇನೆ. ಎಲ್ಲರೂ ಪ್ರಜ್ವಲಿಸಲಿ.

ಅಂತಿಮವಾಗಿ, ನನ್ನಲ್ಲಿ ಇಷ್ಟು ವರ್ಷಗಳಿಂದ ಬೆಳೆಯುತ್ತಿರುವ ಪುಸ್ತಕವನ್ನು ನಾನು ಹೊರತರಲು ಸಾಧ್ಯವಾಯಿತು. ಈಗ ಅದೊಂದು ಸಮಾಧಾನ; ದೀರ್ಘಕಾಲದಿಂದ ಬಾಕಿಯಿದ್ದ ಒಂದು ಕೆಲಸದ ಈಡೇರಿಕೆ. ಅದು ಖಂಡಿತವಾಗಿ ಸಾಹಿತ್ಯದ ಮೇರುಕೃತಿಯೇನೂ ಅಲ್ಲ; ಇಷ್ಟು ವರ್ಷಗಳ ಕಾಲ ರೂಪಾಂತರಗೊಂಡ ನಂತರವೂ ಅದೊಂದು ಪರಿಪೂರ್ಣ ಕೃತಿಯಲ್ಲ. ಇದು ಅನೇಕ ಅಜ್ಞಾತ ಸತ್ಯಗಳೆಡೆಗೆ ಒಂದು ಸೂಚಕವಷ್ಟೆ (pointer). ಅನೇಕ ಯಾನಗಳನ್ನು ಆರಂಭಿಸಲು ಇದೊಂದು ಪ್ರಲೋಭನೆಯಾಗಿದೆ. ಅದು ನನಗೆ ಸಂತಸ ತಂದಿದೆ.

ಅಂತಿಮವಾಗಿ ಅದನ್ನು ಮುದ್ರಿತ ಪುಸ್ತಕವಾಗಿ ತರುವ ಕೆಲಸದಲ್ಲಿ ತೊಡಗಿದ್ದ ಎಲ್ಲರೂ ಬಹಳ ಉತ್ಸಾಹದಿಂದ ಕೆಲಸ ಮಾಡಿದ್ದಾರೆ. ಭಗವಂತ ಅವರನ್ನು ಆಶೀರ್ವದಿಸಲಿ.

ಜನರು ನನ್ನನ್ನು ಆಗಾಗ್ಗೆ ಕೇಳುತ್ತಾರೆ, "ಧ್ಯಾನಕ್ಕೆ ಮುನ್ನ ನೀವು ಆಸನಗಳು ಮತ್ತು ಪ್ರಾಣಾಯಾಮಗಳನ್ನು ಏಕೆ ಕಲಿಸಬಾರದು? ಆದರೆ ನಾನು ಯಾವುದೇ ಸಮಯದಲ್ಲಿ ಪ್ರಲೋಭನೆಗೆ ಒಳಗಾಗುವುದಿಲ್ಲ. ನಾನು ಈ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ಹೊಂದಿದ್ದೇನೆ ಎಂಬ ಬಗ್ಗೆ ನನಗೆ ಸಂತಸವಿದೆ.

ಈ ವಿಷಯದಲ್ಲಿ ನಾನು ನಿಸ್ಸಂದಿಗ್ಧವಾಗಿರುವುದು ಏಕೆಂದರೆ ನಾನು ಮಹಾನ್ ಗುರುವಾಗಿದ್ದ ಅಮರರವರ ಪದತಲದಲ್ಲಿ ಕಲಿತಿದ್ದೇನೆ, ಅವರು ಕೇವಲ ಯೋಗಿ ಮಾತ್ರ ಆಗಿರಲಿಲ್ಲ. ಅವರು ಮಹಾನ್ ಋಷಿಯೂ ಆಗಿದ್ದರು. ಪ್ರಪಂಚದಾದ್ಯಂತ ನಡೆಯುತ್ತಿರುವ ಇಡೀ ಕೆಲಸವನ್ನು ನಾನು ಒಂದೇ ಎಂಬಂತೆ ನೋಡುತ್ತೇನೆ. ಅನೇಕ ಅದ್ಭುತ ಯೋಗ ಗುರುಗಳು ಆಕಾಂಕ್ಷಿಗಳಿಗೆ ಆಸನಗಳು ಮತ್ತು ಪ್ರಾಣಾಯಾಮಗಳನ್ನು ಕಲಿಸುತ್ತಿದ್ದಾರೆ. ಅದೇ ಕೆಲಸವನ್ನು ನಾನೂ ಇಲ್ಲಿ ಮಾಡಬೇಕಾಗಿಲ್ಲ. ಅದಕ್ಕಾಗಿಯೇ ನಾನು ಧ್ಯಾನ ಮತ್ತು ಸಮಾಧಿ ಎಂಬ ವಿಶೇಷ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಆದ್ದರಿಂದ ನಾನು ಸದಾ ಆಯ್ದ ಸಣ್ಣ ಗುಂಪನ್ನು ಹೊಂದಿರುತ್ತೇನೆ. ಅದರ ಬಗ್ಗೆ ನನಗೆ ಸಂತಸವಿದೆ.

ಮತ್ತೊಂದು ಅಮರ ಜಯಂತಿ!

ನನಗೆ ಅಮರರವರು ಇಲ್ಲ ಎನಿಸುವುದೇ ಇಲ್ಲ. ಅವರು ಎಂದಿಗೂ ನನ್ನಿಂದ ದೂರವಾಗಿಲ್ಲ. ಭೌತಿಕ ಮತ್ತು ಆಧ್ಯಾತ್ಮಿಕ ಮಟ್ಟದ ಈ ಎಲ್ಲ ಪ್ರಗತಿಯೂ ಅವರ ಅನುಗ್ರಹ. ನನ್ನ ಕಾರ್ಯವೆಂದರೆ ಆ ಅನುಗ್ರಹದ ಸಂಭ್ರಮಾಚರಣೆ ಮಾತ್ರ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

ಕೋವಿಡ್ ಪರಿಸ್ಥಿತಿಯ ಕಾರಣದಿಂದಾಗಿ, ಬೆಂಗಳೂರು ನಗರದ ಕೇಂದ್ರಗಳಲ್ಲಿನ ಧ್ಯಾನದ ತರಗತಿಗಳನ್ನು ಮಾರ್ಚ್ 2021ರ ವರೆಗೆ ರದ್ದುಪಡಿಸಲಾಗಿತ್ತು. ಪಿಡುಗು ಇನ್ನೂ ನಿಂತಿಲ್ಲದಿರುವುದನ್ನು ಮತ್ತು ಪರಿಸ್ಥಿತಿಯು ಇನ್ನೂ ಪೂರ್ಣವಾಗಿ ನಿಯಂತ್ರಣದಲ್ಲಿ ಇಲ್ಲದಿರುವುದನ್ನು ಪರಿಗಣಿಸುತ್ತಾ ಮುಂದಿನ ಸೂಚನೆಯವರೆಗೆ ತರಗತಿಗಳನ್ನು ತೆರೆಯಲಾಗುವುದಿಲ್ಲ. ಪರಿಸ್ಥಿತಿಯನ್ನು ಗಮನಿಸುತ್ತಿರುತ್ತೇವೆ ಮತ್ತು ತರಗತಿಗಳನ್ನು ಯಾವಾಗ ಪುನರಾರಂಭಿಸಬೇಕೆನ್ನುವುದನ್ನು ನಿರ್ಧರಿಸುತ್ತೇವೆ.

ಅಲ್ಲಿಯವರೆಗೂ ವೆಬ್‌ಕಾಸ್ಟ್ ಮೂಲಕ ಭಾನುವಾರದ ತರಗತಿಗಳು ಆನ್‌ಲೈನ್‌ನಲ್ಲಿ ಮುಂದುವರಿಯುತ್ತವೆ. ಬೇಸಿಕ್ ತರಗತಿಗಳನ್ನು ಕೂಡ, ಪ್ರತಿ ಭಾನುವಾರ ಬೆಳಿಗ್ಗೆ 10 ರಿಂದ 11ರ ವರೆಗೆ 'ಆನ್‌ಲೈನ್'ನಲ್ಲಿ ನಡೆಸಲಾಗುತ್ತಿದೆ. ಪ್ರತಿ ತಿಂಗಳಿನ ಮೊದಲನೇ ಭಾನುವಾರ ಹೊಸ ಬ್ಯಾಚ್ ಪ್ರಾರಂಭವಾಗುತ್ತದೆ.

ಹಾಗೂ, ಪ್ರತಿ ತಿಂಗಳು 3ನೇ ಭಾನುವಾರ, ಮಾರ್ಗದರ್ಶಿತ ನೇರ ಆನ್‌ಲೈನ್ ಲೈಟ್ ಚಾನಲಿಂಗ್ ಸೆಷನ್ ನಡೆಸಲಾಗುತ್ತದೆ. ಇದು ಎಲ್ಲರಿಗೂ ತೆರೆದಿರುತ್ತದೆ. ಇದಕ್ಕಾಗಿ ಕೆಳಗಿನ ಲಿಂಕ್‌ಗಳನ್ನು ಬಳಸಿಕೊಳ್ಳಿ:

https://www.lightagemasters.com/lc_live
https://www.facebook.com/lightchannels
https://youtube.com/RevolutionByLight

**ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.**

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/-ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

**ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.**




**Welcome to the 12th World Channels Day**
**on February 1, 2022**

Join us for a guided Light Channelling Session for Individual and World Peace, at the below timings.

English - 8:00 AM | Hindi -12:00 PM | English - 9:00 PM (India Time)

Live on: https://www.lightagemasters.com/lc_live
https://www.facebook.com/lightchannels

**Heal Yourself, Heal the World**

### ಸುದ್ದಿ-ಸೂಚನೆಗಳು

- ಫೆಬ್ರವರಿ 01, 2022ರ ದಿನವನ್ನು 'ವಿಶ್ವ ಚಾನಲ್ಸ್ ದಿನ' (The World Channels Day) ಎಂದು ಆಚರಿಸಲಾಗುವುದು. ಮಾನಸ ಫೌಂಡೇಶನ್‌ನಲ್ಲಿರುವ ಧ್ಯಾನ ಮಂದಿರದಲ್ಲಿ ಲೈಟ್ ಚಾನೆಲಿಂಗ್ ಸೆಷನ್‌ಗಳು ನಡೆಯಲಿದೆ. ಅದರ ಲೈವ್ ವೆಬ್‌ಕಾಸ್ಟ್ http://www.lightagemasters.com/lc_live ನಲ್ಲಿ ಲಭ್ಯವಿರುತ್ತದೆ. ಅದರಲ್ಲಿ ಈ ಕೆಳ ಕಂಡಂತೆ ಮೂರು ಸೆಷನ್‌ಗಳು ಇರುತ್ತವೆ:
  - ಭಾರತದ ಸಮಯ ಬೆಳಿಗ್ಗೆ 8 ಗಂಟೆಗೆ – ಆಂಗ್ಲ ಭಾಷೆಯಲ್ಲಿ
  - ಭಾರತದ ಸಮಯ ಮಧ್ಯಾಹ್ನ 12 ಗಂಟೆಗೆ – ಹಿಂದಿ ಭಾಷೆಯಲ್ಲಿ
  - ಭಾರತದ ಸಮಯ ರಾತ್ರಿ 9 ಗಂಟೆಗೆ – ಆಂಗ್ಲ ಭಾಷೆಯಲ್ಲಿ
- ನೀವು ಮೇಲ್ಕಂಡ ಒಂದು ಅಥವ ಎಲ್ಲ ಲೈಟ್ ಚಾನೆಲಿಂಗ್ ಸೆಷನ್‌ಗಳಲ್ಲಿ ನಮ್ಮೊಂದಿಗೆ ಸೇರಿಕೊಳ್ಳಬಹುದು ಮತ್ತು ಪ್ರಪಂಚಕ್ಕೆ ಹೆಚ್ಚು ಬೆಳಕನ್ನು ಚಾನಲ್ ಮಾಡುವ ಈ ಶ್ರೇಷ್ಠ ಪ್ರಯತ್ನದಲ್ಲಿ ಪಾಲ್ಗೊಳ್ಳಬಹುದು. ನಿಮಗೆ ಅನುಕೂಲವಾಗುವ ಯಾವುದೇ ಸಮಯದಲ್ಲಿ 7 ನಿಮಿಷಗಳ ಕಾಲ ಲೈಟ್ ಚಾನೆಲ್ ಮಾಡುವ ಮೂಲಕ ಕೂಡ ನಮ್ಮನ್ನು ಸೇರಿಕೊಳ್ಳಬಹುದು.
- ಮಹರ್ಷಿ ಅಮರ ಜಯಂತಿಯನ್ನು 06 ಫೆಬ್ರವರಿ 2022ರಂದು ಆಚರಿಸಲಾಗುವುದು. ಸದ್ಯದ ಕೋವಿಡ್ ಪರಿಸ್ಥಿತಿಯಿಂದಾಗಿ, ತಪೋನಗರದಲ್ಲಿ ಭೌತಿಕವಾಗಿ ಸಭೆ ಸೇರುವುದು ಸಾಧ್ಯವಿಲ್ಲ. ವಿದ್ಯಾರ್ಥಿಗಳು ಲೈವ್ ವೆಬ್‌ಕಾಸ್ಟ್ ಮೂಲಕ ಪಾಲ್ಗೊಳ್ಳಬಹುದು.
- 26 ಡಿಸೆಂಬರ್ 2021ರಂದು ಸುಮಾರು 80 ಧ್ಯಾನಿಗಳು ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಲೈಟ್ ಚಾನೆಲ್ ಮಾಡುವ ಮೂಲಕ ಅಖಂಡ ಧ್ಯಾನದಲ್ಲಿ ಭಾಗವಹಿಸಿದರು. ಇತರೆ ಅನೇಕರು ತಪೋನಗರಕ್ಕೆ ಮೈಂಡ್‌ಲಿಂಕ್ ಮಾಡಿಕೊಂಡು ತಮ್ಮ ತಮ್ಮ ಸ್ಥಳಗಳಿಂದ ಲೈಟ್ ಚಾನೆಲ್ ಮಾಡುವ ಮೂಲಕ ಭಾಗವಹಿಸಿದರು.
- ಶಂಬಲ ಗ್ರೂಪ್‌ನ 2022ರ ಸಾಲಿನ ಮೊದಲನೇ ಸಭೆ 09 ಜನವರಿ 2022ರಂದು ಮತ್ತು ರಾ ಗ್ರೂಪ್‌ನ ಸಭೆ 16 ಜನವರಿ 2022ರಂದು ಜರುಗಿತು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಮಂಗಳ | ಮಹರ್ಷಿ ಅಮರರವರ ಜನ್ಮ ದಿನ<br>ವರ್ಲ್ಡ್ ಚಾನೆಲ್ಸ್ ಡೇ (ವಿಶ್ವ ಚಾನಲ್ಸ್ ದಿನ)<br>ಅಮಾವಾಸ್ಯೆ |
| 06 | ಭಾನು | ಮಹರ್ಷಿ ಅಮರ ಜಯಂತಿ ಆಚರಣೆ |
| 08 | ಮಂಗಳ | ರಥ ಸಪ್ತಮಿ |
| 09 | ಬುಧ | ಶುಕ್ಲ ಅಷ್ಟಮಿ |
| 11 | ಶುಕ್ರ | ಶುಕ್ಲ ದಶಮಿ |
| 16 | ಬುಧ | ಪೂರ್ಣಿಮೆ |
| 24 | ಗುರು | ಕೃಷ್ಣ ಅಷ್ಟಮಿ |

### ಈ ತಿಂಗಳು ತಪೋನಗರದಲ್ಲಿ

ಸದ್ಯಕ್ಕೆ ಎಲ್ಲಾ ಕಾರ್ಯಕ್ರಮಗಳನ್ನೂ ವರ್ಚ್ಯುವಲ್ ಆಗಿ ವೆಬ್‌ಕಾಸ್ಟ್ ಮೂಲಕ ಮಾತ್ರ ನಡೆಸಲಾಗುತ್ತಿದೆ ಮತ್ತು ಸದ್ಯಕ್ಕೆ ತಪೋನಗರದಲ್ಲಿ ಯಾವುದೇ ರೀತಿಯ ಭೌತಿಕ ಸಭೆಗಳು ಇಲ್ಲ.

ಭಾನುವಾರಗಳಂದು ಉಪನ್ಯಾಸಗಳು :
ಬೆಳಿಗ್ಗೆ 11ರಿಂದ ಮಧ್ಯಾಹ್ನ 12
ಲೈಟ್ ಚಾನೆಲಿಂಗ್:
ಮಧ್ಯಾಹ್ನ 12 ರಿಂದ 1

### ಮಹರ್ಷಿ ಅಮರ ಜಯಂತಿ ಕಾರ್ಯಕ್ರಮ
### ಭಾನುವಾರ 06-02-2022

ಬೆಳಿಗ್ಗೆ 11 ಸ್ವಾಗತ
ಮಾತುಗಳು
ವಿಶೇಷ ಧ್ಯಾನ

ಭಾನುವಾರದ ತರಗತಿಗಳ ಲೈವ್ ವೆಬ್ ಕಾಸ್ಟ್ ವಿದ್ಯಾರ್ಥಿಗಳಿಗೆ ಲಭ್ಯವಿರುತ್ತದೆ. ವಿವರಗಳಿಗಾಗಿ ದಯವಿಟ್ಟು ಮಾನಸ ಕಛೇರಿಯನ್ನು ಇ-ಮೇಲ್ ಮೂಲಕ ಸಂಪರ್ಕಿಸಿ.

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ವೀಕ್ಷಿಸಲು ದಯವಿಟ್ಟು www.speakingtree.inಗೆ ಭೇಟಿ ಕೊಡಿ.

## ಮಹರ್ಷಿ ಅಮರ

**ಕೀರ್ತಿ ಬಿಸರಹಳ್ಳಿ; ಅನು: ಕಾಂಚನಲತ**

ರಾಜ ಮನೆತನದಲ್ಲಿ ಜನಿಸಿದ ಮತ್ತು ಒಬ್ಬ ಆಧ್ಯಾತ್ಮಿಕ ದೈತ್ಯ, ಅಮರರವರು ಜೀವನಕ್ಕಿಂತ ಸದಾ ದೊಡ್ಡವರು. ಅದು ಅವರ ಸರಳತೆ ಅಥವಾ ನಮ್ರತೆ ಇರಬಹುದು, ಅವರ ವ್ಯಕ್ತಿತ್ವವು ಹಿರಿಯ ಮತ್ತು ಕಿರಿಯರನ್ನು ಒಂದೇ ಸಮನಾಗಿ ತೊಡಗಿಸಿಕೊಳ್ಳುತ್ತಿತ್ತು. ಪರಿಪೂರ್ಣತಾವಾದಿಯಾದ ಅವರು, ಏನೇ ಮಾಡಿದರೂ ಅದಕ್ಕೆ ಮೌಲ್ಯ ಹೆಚ್ಚಿಸುತ್ತಿದ್ದರು. ಅವರನ್ನು ನಾವು ಮುಖತಃ ಭೇಟಿ ಮಾಡದೇ ಇದ್ದರೂ, ನಾವು ಪ್ರತಿ ಒಬ್ಬರೂ, ನಮ್ಮ ಜೀವನಗಳಲ್ಲಿ ಅವರ ಉದಾತ್ತ ಇರುವಿಕೆಯನ್ನು ಒಂದಲ್ಲ ಒಂದು ರೀತಿಯಲ್ಲಿ ಸದಾ ಅನುಭವಿಸುತ್ತೇವೆ.

ಅವರ ಅದ್ವಿತೀಯವಾದ ಯೋಚಿಸುವ ಮತ್ತು ಭಾವಿಸುವ ರೀತಿಯು ವಿಸ್ಮಯಕಾರಿಯಾದುದು. ನಮಗೆ ಋಷಿಗಳು ನೀಡಿರುವ ಪ್ರತಿ ಒಂದು ಪ್ರಮಾಣವನ್ನೂ (affirmation) ಅವರು ಜೀವಿಸಿದ್ದರು. ಈ ಸಮಸ್ತ ಸೃಷ್ಟಿಯು ನಮ್ಮ ಕುಟುಂಬ ಎಂದು ಋಷಿಗಳು ಹೇಳುವಂತೆಯೇ, ಅಮರರವರು ಇಡೀ ಸೃಷ್ಟಿಗಾಗಿ ಸದಾ ಯೋಚಿಸುತ್ತಿದ್ದರು ಮತ್ತು ಭಾವಿಸುತ್ತಿದ್ದರು. ಪ್ರತಿಯೊಂದು ಪ್ರಾರ್ಥನೆ, ಪ್ರತಿಯೊಂದು ವ್ಯಕ್ತಿಯ ನಿಟ್ಟುಸಿರು ಮತ್ತು ಈ ಸೃಷ್ಟಿಯಲ್ಲಿನ ಪ್ರತಿಯೊಂದನ್ನೂ ನೋಡಿಕೊಳ್ಳಲಾಗುತ್ತದೆ. ನಿತ್ಯ ಜೀವನಕ್ಕೆ ಒಂದು ಆಧ್ಯಾತ್ಮಿಕ ಕೋನವನ್ನು ಅವರು ನೀಡಿದರು. ಕ್ಷುಲ್ಲಕ ಭಿನ್ನಾಭಿಪ್ರಾಯ ಮತ್ತು ವಾದಗಳನ್ನು ಮೀರಿ ಹೋಗಲು ಮತ್ತು ನಮ್ಮ ಆಲೋಚನೆಗಳನ್ನು ಮತ್ತು ಭಾವನೆಗಳನ್ನು ಇಡೀ ಸೃಷ್ಟಿಗೆ ವಿಸ್ತರಿಸಿಕೊಳ್ಳಲು ಜನರಿಗೆ ಉತ್ತೇಜನ ನೀಡುತ್ತಿದ್ದರು

ನಾವು ಬೆಳೆಯಲು ಮತ್ತು ವಿಸ್ತರಿಸಲು ಹೆಣಗುತ್ತಿರುವಾಗ, ಅವರು ನಮ್ಮ ಮಟ್ಟಕ್ಕೆ ಇಳಿಯುತ್ತಾರೆ ಮತ್ತು ನಮ್ಮ ಪ್ರತಿ ದಿನದ ಸಮಸ್ಯೆಗಳನ್ನು ಪರಿಹರಿಸುತ್ತಾರೆ ಹಾಗೂ ನಮ್ಮ ಚಂಚಲತೆಯ ಹೊರತಾಗಿಯೂ, ನಮ್ಮ ಆಧ್ಯಾತ್ಮಿಕ ಬೆಳವಣಿಗೆಯ ಮೇಲೆ ಗಮನ ನೀಡಲು ಸೌಮ್ಯವಾಗಿ ಮಾರ್ಗದರ್ಶನ ನೀಡುತ್ತಾರೆ. ಆಧ್ಯಾತ್ಮಿಕತೆಯನ್ನು ನಮ್ಮ ಜೀವನ ಶೈಲಿಯನ್ನಾಗಿಸಲು ಅವರು ಅವಿರತವಾಗಿ ಮತ್ತು ಛಲದಿಂದ ಕೆಲಸ ಮಾಡುತ್ತಾರೆ. ಆಧ್ಯಾತ್ಮಿಕತೆಯು ನಮ್ಮ ಇಲ್ಲಿಯ ಜೀವನದ ಅನುಭವಗಳನ್ನು ಶ್ರೀಮಂತಗೊಳಿಸುತ್ತದೆ ಮತ್ತು ಪೂರೈಸುತ್ತದೆ ಎಂಬ ಅಂಶಕ್ಕೆ ಒತ್ತು ಕೊಡುತ್ತಾರೆ.

ಅವರು ಕ್ರಿಕೆಟ್‌ನಂತಹ ಐಹಿಕ ವಿಷಯವನ್ನಾಗಲೀ ಮತ್ತು ನಂಬಲಸಾಧ್ಯವಾದ ಅವರ ಆಸ್ಟ್ರಲ್ ಸಾಹಸಗಳನ್ನಾಗಲೀ ಒಂದೇ ತೆರನಾದ ಸರಳತೆಯಿಂದ ಮಾತನಾಡಬಲ್ಲವರಾಗಿದ್ದರು. ಅಧ್ಯಾತ್ಮಿಕ ವಲಯದಲ್ಲಿ ಒಬ್ಬ ಅದ್ಭುತ ಋಷಿಯಾಗಿದ್ದರೂ, ಅವರು ಭೇಟಿ ಮಾಡಿದ ಪ್ರತಿ ವ್ಯಕ್ತಿಗೂ ಪ್ರೀತಿಯ 'ಅಂಕಲ್' ಕೂಡ ಆಗಿದ್ದರು. ದೇವರುಗಳೊಂದಿಗೆ ಮಾತನಾಡುತ್ತಿದ್ದವರು, ಧರ್ಮಾಚರಣೆಗಳ ಬಗ್ಗೆ ಒಂದೇ ಸಮನೆ ಮಾತನಾಡುವ ಅರ್ಚಕರ ಮಾತುಗಳನ್ನು ಅಡ್ಡಿ ಪಡಿಸದೆ ಅಥವಾ ಅವರು ಏನು ಮಾಡಬೇಕು ಅಥವಾ ದೇವರನ್ನು ಹೇಗೆ ಒಲಿಸಿಕೊಳ್ಳಬೇಕು ಎಂದು ಹೇಳದೇ ಆಲಿಸುತ್ತಿದ್ದರು. ಅವರು ಅವರಿಗೆ ತಲೆ ಬಾಗುತ್ತಿದ್ದರು ಮತ್ತು ಋಷಿಗಳ ಕಾರ್ಯವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದರು. ಅವರು ನಮ್ರತೆಯ ಸಾಕಾರ ರೂಪವೇ ಆಗಿದ್ದರು.

ಅಮರರವರು ನಮ್ಮ ಜೀವನಗಳಲ್ಲಿ ಹರಿಯುತ್ತಿರುವ ಒಂದು ಅಂತ್ಯವಿಲ್ಲದ ಪ್ರೀತಿಯ ಸಮುದ್ರ ಮತ್ತು ಅದನ್ನು ಅವರ ಉಪಸ್ಥಿತಿಯಿಂದ ವರ್ಧಿಸುತ್ತಿದ್ದಾರೆ. ■

## ಉದಾತ್ತ ವ್ಯಕ್ತಿತ್ವ

**ಉಷಾ ಸತೀಶ್‌ಚಂದ್ರ; ಅನು: ಸುಜಾತ ವಿ**

ಅಮರರವರು ನಮ್ಮನ್ನು ಋಷಿಗಳ ಮಾರ್ಗಕ್ಕೆ ಪರಿಚಯಿಸಿದರು. ಧ್ಯಾನದ ಮಾರ್ಗವಷ್ಟೇ ಅಲ್ಲ ಅಭಿವ್ಯಕ್ತಿಯ ಮಾರ್ಗ – ಗೊತ್ತಿಲ್ಲದಿರುವ ಸತ್ಯವನ್ನು ಅನ್ವೇಷಿಸುವ ಒಂದು ಕ್ಷೇತ್ರ ಕೂಡ. ಜನರು ಧ್ಯಾನಕ್ಕೆ ಸೇರಿದಾಗಲೆಲ್ಲ, ಅವರಿಗೆ ತಮ್ಮ ನೈಜ ಸ್ವರೂಪವನ್ನು ಬಹಿರಂಗಪಡಿಸುವುದಕ್ಕಾಗಿ ಅಮರರವರು, "ಆತ್ಮದ ಅವರೋಹಣ"ವನ್ನು ವಿವರಿಸುತ್ತಿದ್ದರು. ಅವರು ಕೆಲಸಕ್ಕೆ ಅಸಾಧಾರಣವಾಗಿ ಸಮರ್ಪಿಸಿಕೊಂಡಿದ್ದರು. ನೀವು ಅಮರರವರಿಗೆ ಶ್ರುತಿಗೊಂಡಾಗ, ನೀವು ತಪೋನಗರಕ್ಕೆ, ಋಷಿಗಳಿಗೆ ಮತ್ತು ಅವರ ಕಲ್ಪನೆಗೆ ಶ್ರುತಿಗೊಳ್ಳುವಿರಿ. ಎಲ್ಲರನ್ನೂ ಸಮರ್ಥ ಧ್ಯಾನಿಗಳನ್ನಾಗಿ ಮಾಡುವುದು ಮತ್ತು ಸತ್ಯ ಯುಗವನ್ನು ಸ್ವೀಕರಿಸುವುದಕ್ಕೆ ಮತ್ತು ಹರಡುವುದಕ್ಕೆ ನಮ್ಮನ್ನು ತಯಾರು ಮಾಡುವುದು ಅವರ ಕೆಲಸ.

ತಪೋನಗರವನ್ನು ಅಮರರವರು ಸ್ಥಾಪಿಸಿದರು. ತಪೋನಗರ ಎಲ್ಲರಿಗೂ ಸ್ಥಳಾವಕಾಶಮಾಡಿಕೊಡುತ್ತದೆ. ಅದು ಒಟ್ಟಿಗೆ ಸೇರುವ, ಧ್ಯಾನ ಮಾಡುವ ಜಾಗ ಮತ್ತು ನಮ್ಮ ಮನಸ್ಸನ್ನು ಶುದ್ಧೀಕರಿಸುವ ಮತ್ತು ಚೈತನ್ಯಗೊಂಡು, ಶಕ್ತಿ ಪಡೆದು ಹಿಂದಿರುಗುವ ಜಾಗ. ಅವರು ಇಲ್ಲಿ ಶಂಬಲವನ್ನು ಕಲ್ಪಿಸಿಕೊಂಡಿದ್ದರು, ಪ್ರೀತಿಯಿಂದ ತುಂಬಿರುವ ಒಂದು ನಗರ. ಧ್ಯಾನದಲ್ಲಿ ನಮ್ಮ ಅರಿವು ಅತ್ಯುನ್ನತ ಮಟ್ಟದ ಪ್ರಜ್ಞೆಯನ್ನು ತಲುಪಿದಾಗ ನಾವು ಈ ದೈವಿಕ ಪ್ರೀತಿಯನ್ನು ಅನುಭವಿಸುತ್ತೇವೆ. ಆ ಸಮಯದಲ್ಲಿ ನಾವು ಆ ಪ್ರೀತಿಯನ್ನು ಅನುಭವಿಸುತ್ತೇವೆ ಮತ್ತು ಅರಿಯುತ್ತೇವೆ. ನಾವು ಪರಿಪೂರ್ಣವಾಗಿ ಬೆಳೆಯುವಂತಹ ಅನನ್ಯವಾದ ಅವಕಾಶಗಳನ್ನು ಅಮರರವರು ಸೃಷ್ಟಿಸಿದರು. ನಾವು ಇಲ್ಲಿರುವ ಉದ್ದೇಶ ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು ಅಥವಾ ಪರಿಪೂರ್ಣರಾಗಿ ಬೆಳೆಯುವುದು ಅಷ್ಟೇ ಅಲ್ಲ ಆದರೆ ಸತ್ಯ ಯುಗವನ್ನು ಸ್ಥಾಪಿಸುವುದು. ಇಲ್ಲಿರುವ ಎಲ್ಲರೂ ಬೇರೆಲ್ಲರ ಭಾವನೆಗಳನ್ನು ಅನುಭವಿಸಬೇಕು, ಜನರ ಹೃದಯದಲ್ಲಿ ನಿಜವಾದ ಸಂಪತ್ತನ್ನು ಅನುಭವಿಸಬೇಕು.

ಪ್ರಕೃತಿಯು ಚಕ್ರಗತಿಯಲ್ಲಿ ಸುತ್ತುತ್ತದೆ, ಹಾಗೆಯೇ ಮಾನಸದಲ್ಲಿ ಗುರೂಜಿರವರ ಪ್ರಾಧಾನ್ಯತೆ ಕೂಡ ಧ್ಯಾನದ ಮೇಲಿತ್ತು. ಅಮರರವರ ಜಯಂತಿ ಮತ್ತು ಅಮರರವರ ಸಮಾಧಿ ದಿವಸಗಳಲ್ಲಿಯೂ ಧ್ಯಾನವೇ! ಈ ಅವಧಿಯಲ್ಲಿ ಬಹಳ ಗಮನಾರ್ಹ ವಿಷಯಗಳು ಸಂಭವಿಸುತ್ತವೆ. ಈ ದಿನವು ಬೆಳಕನ್ನು ಪೂರ್ಣವಾಗಿ ಸಂಗ್ರಹಿಸಿ ಸಮೀಕರಿಸಿಕೊಳ್ಳುವ ಮತ್ತು ಮಾರ್ಗದರ್ಶನವನ್ನು ಕೋರುವ ದಿನವಾಗಿದೆ. ಅಮರರವರು ಮತ್ತು ಗುರೂಜಿಯವರು ಹಲವಾರು ಗಂಟೆಗಳನ್ನು ಮೌನವಾಗಿ ಕುಳಿತೇ ಕಳೆಯುತ್ತಿದ್ದರು ಮತ್ತು ಅಮರರವರು ಯಾವಾಗಲೂ ಮೋಡಗಳಲ್ಲಿ ಮತ್ತು ಅದರಿಂದ ಆಚೆ ಇರುತ್ತಿದ್ದರು. ಅಂತಹ ಕ್ಷಣಗಳಲ್ಲಿ ಗುರೂಜಿಯವರು ಅಮರರವರ ಶ್ರೇಷ್ಠತೆ ಮತ್ತು ಉದಾತ್ತತೆಗಳನ್ನು ಅನುಭವಿಸುತ್ತಿದ್ದರು ಮತ್ತು ಅವರನ್ನು ಅಮರಗೊಳಿಸಿದರು. ನಾವು ಅಮರ ಸಮಾಧಿಗೆ ಹೋಗುತ್ತೇವೆ, ಅವರ ಮುಂದೆ ಕುಳಿತು ನಮ್ಮ ಹೃದಯದಲ್ಲಿರುವುದೆಲ್ಲವನ್ನೂ ಹೇಳಿಕೊಳ್ಳುತ್ತೇವೆ. ನಮ್ಮ ಆತ್ಮವನ್ನು ಮುಟ್ಟಿ ನಮಗೆ ಸಾಂತ್ವನ ನೀಡಲು ಅವರು ಎದ್ದುಬರುವುದನ್ನು ನಾವು ನೋಡಲು ಸಾಧ್ಯವಾದರೆ ಅದು ಅತಿಶಯೋಕ್ತಿಯೇನಲ್ಲ. ನಾವು ಬೆಳೆದು ಅವರ ಮಟ್ಟದ ಉದಾತ್ತತೆಯನ್ನು ತಲುಪಿದಾಗ, ನಾವು ಕೂಡ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ. ■

## ಲೈಟ್ ಚಾನಲ್ಸ್ ವಿಶ್ವ ಸಂಚಲನ

ಇದು, ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವುದಕ್ಕಾಗಿ ಆತ್ಮಪ್ರಜ್ಞೆಯಲ್ಲಿ ನಡೆಯುವ ಒಂದು ಸಂಚಲನ. ಭಾಷಣಗಳು, ಬಾವುಟಗಳಿಲ್ಲದ, ಬೆಳಕನ್ನು ಚಾನಲ್ ಮಾಡಿದರಷ್ಟೇ ಸಾಕಾಗುವ ಒಂದು ಸಂಚಲನ. ಪದಗಳು ಮಾಡಲಾಗದ ಎಲ್ಲವನ್ನೂ ಬೆಳಕೇ ಮಾಡುತ್ತದೆ.

ನಾವು ಚಾನಲ್ ಮಾಡಿ ಬೆಳಕನ್ನು ಹರಡಿದಾಗ, ಅದು ಬೇರೆಯವರ ಹೃದಯಗಳನ್ನು ಮತ್ತು ಮನೆಗಳನ್ನು ಪ್ರವೇಶಿಸುತ್ತದೆ ಮತ್ತು ಆಲೋಚನೆಗಳು ಮತ್ತು ಭಾವನೆಗಳಲ್ಲಿರುವ ಕತ್ತಲನ್ನು ಪರಿವರ್ತಿಸುತ್ತದೆ. ವ್ಯಕ್ತಿಗಳೊಂದಿಗೆ ಪ್ರಪಂಚವೂ ಪರಿವರ್ತನೆಗೊಳ್ಳುತ್ತದೆ.

ಇದು ಭೌತಿಕ ಬೆಳಕಲ್ಲ, ಆದರೆ ಇದು, ಯಾವುದರಿಂದ ಇಡೀ ಸೃಷ್ಟಿ ಬಂದಿದೆಯೋ ಆ ಅತಿ ಸೂಕ್ಷ್ಮ ಬೆಳಕು. ಈ ಬೆಳಕಿನಲ್ಲಿ ಎಲ್ಲವೂ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ, ಆದರೆ ಎಲ್ಲಾ ಕಡೆ ಇದೆ.

ನಾವು ಪ್ರತಿದಿನ ಎದ್ದಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ಚಾನಲ್ ಮಾಡಿ ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.

ಚಾನಲ್ ಮಾಡಿ ಬೆಳಕನ್ನು ಹರಡುವುದಕ್ಕಾಗಿ, ನಿಮ್ಮ ಮೇಲೆ ಬೆಳಕಿನ ಸಾಗರವೊಂದನ್ನು ಕಲ್ಪಿಸಿಕೊಳ್ಳಿ, ನಂತರ ಈ ಸಾಗರದಿಂದ ಬೆಳಕಿನ ದಪ್ಪ ಕಿರಣವೊಂದು ಕೆಳಬಂದಂತೆ ಕಲ್ಪಿಸಿಕೊಳ್ಳಿ, ಈ ಬೆಳಕು ನಿಮ್ಮನ್ನು ಪ್ರವೇಶಿಸಿ ನಿಮ್ಮ ದೇಹವನ್ನು ಸಂಪೂರ್ಣವಾಗಿ ತುಂಬುತ್ತಿದೆಯೆಂದು ಕಲ್ಪಿಸಿಕೊಳ್ಳಿ, ಒಂದು ನಿಮಿಷ ಈ ಬೆಳಕನ್ನು ಅನುಭವಿಸಿ. ನಂತರ ಈ ಬೆಳಕು ನಿಮ್ಮ ದೇಹದಿಂದ ಹೊರಬಂದು ನಿಧಾನವಾಗಿ ಸುತ್ತಲೂ ಹರಡುತ್ತಾ, ನಿಮ್ಮ ಮನೆ, ಪ್ರದೇಶ, ದೇಶ ಮತ್ತು ಇಡೀ ಪ್ರಪಂಚವನ್ನು ತುಂಬುತ್ತಿದೆ ಎಂದು ಕಲ್ಪಿಸಿಕೊಳ್ಳಿ.

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರವರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಎಲ್ಲರಿಗೂ ಹರಡಿ.

www.lightchannels.comಗೆ ಭೇಟಿ ನೀಡಿ.

## ಶಂಬಲದ ನಿಯಮಗಳು

**ಈ ಏಳು ನಿಯಮಗಳನ್ನು ಶಂಬಲದಲ್ಲಿ ವಾಸಿಸುತ್ತಿರುವ ಜನರು ಅಭ್ಯಾಸ ಮಾಡುತ್ತಾರೆ. ಅವರು ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವನದಲ್ಲಿಯೇ ಬದುಕುತ್ತಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ನಂತರ ಅವುಗಳನ್ನು ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ನಕಾರಾತ್ಮಕತೆಗಳನ್ನು ಗೆಲ್ಲಲು ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಸಿದ್ಧಗೊಳಿಸುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

**ಗುರೂಜಿಯವರ ಭಾಷಣಗಳಿಂದ ಆಯ್ದ ಭಾಗಗಳು**

ಸಂ: ಶೋಭಾ ಕೆ. ರಾವ್; ಅನು: ಸುಜಾತ ವಿ

ಅಕ್ಟೋಬರ್ 2006(ಮುಂದುವರೆದಿದ್ದು)

ಸೃಷ್ಟಿ ಕರ್ತನ ದೇಹದಲ್ಲಿ ಸಮಸ್ತ ಸೃಷ್ಟಿಯೂ ಸಂಭವಿಸಿತ್ತು ಮತ್ತು ಸಂಭವಿಸುತ್ತದೆ. ಇದನ್ನು ನೀವು ಚಿಂತನೆ ಮಾಡಬೇಕು. ಅಂತರಿಕ್ಷ (Space) ಸೃಷ್ಟಿ ಆದಾಗ, ಕಾಲ ಸ್ವಲ್ಪ ಬೇಗನೇ ಚಲಿಸಲು ಶುರುವಾಯಿತು. ಈ ಸೃಷ್ಟಿ ಸಂಭವಿಸುವ ಮೊದಲೂ ಕಾಲವಿತ್ತು. ಬಹುಶಃ ಚಲನೆ ಇರಲಿಲ್ಲ. ನಮ್ಮ ಸೀಮಿತವಾದ ಶಕ್ತಿಯಿಂದ ನಮಗೆ ಅದು ಅರ್ಥವಾಗುವುದಿಲ್ಲ. ಅಂತರಿಕ್ಷ ಹಾಗೂ ಸಮಯ ಇವುಗಳಲ್ಲಿ ದೈವಿಕ ಮತ್ತು ಭೌತಿಕ ಬ್ರಹ್ಮಾಂಡಗಳು ಇರುತ್ತವೆ. ಅಂತರಿಕ್ಷ ಹಾಗೂ ಸಮಯ ಇವುಗಳನ್ನು ಬೇರ್ಪಡಿಸಲಾಗುವುದಿಲ್ಲ.

ಅಂತರಿಕ್ಷಕ್ಕೆ ಪ್ರಜ್ಞೆ ಇರುತ್ತದೆ. ಪ್ರಜ್ಞೆಯು ದೈವಿಕ ವಸ್ತು ಮತ್ತು ಅದರಲ್ಲಿ ಬುದ್ಧಿಶಕ್ತಿ ಇರುತ್ತದೆ. ಪ್ರಜ್ಞೆಯಿಂದ, ದೈವಿಕ ಮತ್ತು ಭೌತಿಕ ಬ್ರಹ್ಮಾಂಡಗಳು ಸೃಷ್ಟಿ ಆದವು. ಪ್ರಜ್ಞೆಯು (ಅದು ತುಂಬಾ ಸೂಕ್ಷ್ಮ ವಸ್ತು) ಸಾಂದ್ರವಾಗುತ್ತಾ ಹೋಯಿತು. ಅದು ಸಾಂದ್ರವಾಗುತ್ತಾ ಹೊದಂತೆ ಸೃಷ್ಟಿಯು ಹೊರ ಬಂತು. ಮೊದಲು ದೈವಿಕ ಬ್ರಹ್ಮಾಂಡ, ನಂತರ ಭೌತಿಕ ಬ್ರಹ್ಮಾಂಡವು ಸೃಷ್ಟಿ ಆಯಿತು. ದೈವಿಕ ಬ್ರಹ್ಮಾಂಡದಲ್ಲಿ, ಪ್ರಜ್ಞೆಯು ಅತ್ಯಂತ ಸೂಕ್ಷ್ಮವಾಗಿರುತ್ತದೆ ಆದರೆ ನಾವು ಭೌತಿಕ ಬ್ರಹ್ಮಾಂಡದಲ್ಲಿ ಕೆಳ ಬರುತ್ತಾ ಹೋದಂತೆ, ಅದು ಹೆಚ್ಚು ಹೆಚ್ಚು ಸಾಂದ್ರವಾಗುತ್ತಾ ಹೋಗುತ್ತದೆ.

ಭೌತಿಕ ಬ್ರಹ್ಮಾಂಡದಲ್ಲಿ ಹದಿನಾಲ್ಕು ಲೋಕಗಳು ಸೃಷ್ಟಿ ಆದವು. ಮೊದಲನೆಯ ಲೋಕವಾದ ಸತ್ಯ ಲೋಕದಲ್ಲಿ ಪ್ರಜ್ಞೆಯು ಬಹಳ ಸೂಕ್ಷ್ಮ(subtle)ವಾಗಿರುತ್ತದೆ. ಹದಿನಾಲ್ಕನೆಯ ಲೋಕದಲ್ಲಿ ಅದು ಅತೀ ಸ್ಥೂಲ (gross)ವಾಗಿರುತ್ತದೆ. ಎಷ್ಟು ಸ್ಥೂಲವಾಗಿರುತ್ತದೆ ಎಂದರೆ ನಾವು ಅಲ್ಲಿನ ದೇಹಗಳನ್ನು ಆಕ್ರಮಿಸಿಕೊಳ್ಳಲಾಗುವುದಿಲ್ಲ. ನಾವು ಆತ್ಮಗಳು ಅಲ್ಲಿನ ದೇಹಗಳನ್ನು ಪ್ರವೇಶಿಸಲು ಆಗದಷ್ಟು ಅವು ಸ್ಥೂಲವಾಗಿರುತ್ತವೆ. ನಮ್ಮ ಈ ಅದ್ಭುತವಾದ ಭೂಲೋಕದಲ್ಲಿ, ನಮಗೆ ಸೂಕ್ಷ್ಮ (Astral) ಹಾಗೂ ಭೌತಿಕ(physical) ಪ್ರಪಂಚಗಳು ಎರಡೂ ಇವೆ, ಸ್ಪಷ್ಟವಾಗಿ ಬೇರೆಯಾಗಿವೆ. ಇಲ್ಲಿ ಮಾತ್ರವೇ ಭೌತಿಕ ವಸ್ತುಗಳಿಗೆ ಅಥವಾ ವಾಸ್ತವಿಕತೆಗೆ ಸೂಕ್ಷ್ಮದ ಪ್ರತಿರೂಪ (counterpart) ಅಸ್ತಿತ್ವದಲ್ಲಿರುತ್ತದೆ. ನಮಗೆ ಭೌತಿಕ ಶರೀರ ಮತ್ತು ಸೂಕ್ಷ್ಮ ಶರೀರಗಳಿವೆ. ಭೌತಿಕ ವಸ್ತುಗಳಿವೆ ಮತ್ತು ಅವುಗಳ ಸೂಕ್ಷ್ಮ ಪ್ರತಿರೂಪಗಳಿವೆ. ಇದು ಇಲ್ಲಿ ಮಾತ್ರವಿದೆ, ಇನ್ನು ಯಾವ ಲೋಕದಲ್ಲೂ ಇಲ್ಲ.

ಸಪ್ತ ಋಷಿಗಳು ಅತ್ಯುನ್ನತ ಲೋಕವಾದ ಸತ್ಯ ಲೋಕದಲ್ಲಿ ವಾಸಿಸುತ್ತಾರೆ. ಅಲ್ಲಿ ಆಧ್ಯಾತ್ಮಿಕ ಅರಿವು ಅತ್ಯುನ್ನತ ಮಟ್ಟದಲ್ಲಿದೆ. ನೀವು ಕೆಳಗೆ ಬಂದಂತೆ, ಆಧ್ಯಾತ್ಮಿಕ ಅರಿವು ಕಡಿಮೆ ಆಗುತ್ತದೆ. ಹದಿನಾಲ್ಕನೆಯ ಲೋಕದಲ್ಲಿ, ಆಧ್ಯಾತ್ಮಿಕ ಅರಿವು ಇರುವುದಿಲ್ಲ. ವಿಭಿನ್ನ ಜೀವಿಗಳು ಅಥವಾ ವ್ಯಕ್ತಿತ್ವಗಳನ್ನು ಬೇರೆ ಬೇರೆ ಲೋಕಗಳಿಗಾಗಿ ಸೃಷ್ಟಿಸಲಾಯಿತು. ಸತ್ಯ ಲೋಕಕ್ಕೆ ಕೆಲವೊಂದು ರೀತಿಯ ಜೀವಿಗಳನ್ನು ಅಥವಾ ಆತ್ಮಗಳನ್ನು ಸೃಷ್ಟಿಸಲಾಯಿತು. ಮತ್ತು ಕೆಳಗೆ ಬಂದಂತೆ, ಬೇರೆ ಜೀವಿಗಳನ್ನು ಸೃಷ್ಟಿಸಲಾಗಿತ್ತು – ದೇವದೂತರನ್ನು ಅತ್ಯುನ್ನತ ಲೋಕಗಳಲ್ಲಿ ಸೃಷ್ಟಿಸಲಾಯಿತು, ಮತ್ತು ರಾಕ್ಷಸರನ್ನು ಅತ್ಯಂತ ಕೆಳಗಿನ ಲೋಕದಲ್ಲಿ ಸೃಷ್ಟಿಸಲಾಯಿತು. ಹದಿನಾಲ್ಕು ತರದ ಜೀವಿಗಳನ್ನು ಹದಿನಾಲ್ಕು ಬೇರೆ ಬೇರೆ ಲೋಕಗಳಿಗಾಗಿ ಸೃಷ್ಟಿಯಾಯಿತು. ನಮ್ಮ ಈ ಭೂ ಲೋಕದಲ್ಲಿ ಮಾತ್ರ ಯಾವುದೇ ಜೀವಿಗಳು ಇಲ್ಲಿಗೆ ಬರಬಹುದು ಮತ್ತು ಹುಟ್ಟ ಬಹುದು. ಆದರೆ, ಸತ್ಯ ಯುಗದಂತಹ ಕೆಲವು ಕಾಲಗಳು ಇವೆ. ಸತ್ಯ ಯುಗದಲ್ಲಿ, ಕೆಳಗಿನ ಲೋಕಗಳಲ್ಲಿನ ಜೀವಿಗಳು ಬರುವುದಿಲ್ಲ, ಏಕೆಂದರೆ ಆ ಕಾಲದಲ್ಲಿ ಲಭ್ಯವಿರುವ ಪರಿಶುದ್ಧತೆಯು ಅವರಿಗೆ ಹೊಂದಿಕೆಯಾಗುವುದಿಲ್ಲ.

ಈ ರೀತಿಯ ಪ್ರತಿಯೊಂದು ವರ್ಗದ ಜೀವಿಗಳೂ ಬೇರೆ ಬೇರೆ ನಿಯಮಗಳ ಗುಂಪಿನ ಆಡಳಿತಕ್ಕೆ ಒಳಪಡುತ್ತಾರೆ. ಹದಿನಾಲ್ಕು ನಿಯಮಗಳ ಗುಂಪುಗಳಿವೆ. ಈ ಭೂಮಿಯ ಮೇಲೆ, ಪ್ರತ್ಯೇಕ ಅವಧಿಗಳಲ್ಲಿ, ಈ ಪ್ರತ್ಯೇಕವಾದ ನಿಯಮಗಳನ್ನು ಪಾಲಿಸಬೇಕು. ಆದರೆ ವಿಶ್ವವ್ಯಾಪಿಯಾದ ಕೆಲವು ನಿಯಮಗಳಿವೆ, ಅದು ಸತ್ಯ ಮತ್ತು ಪ್ರಾಮಾಣಿಕತೆ. ಎಲ್ಲ ಕಾಲಕ್ಕೂ ಅವು ಅನ್ವಯಿಸುತ್ತವೆ.

ಮೊದಲನೆಯ ಲೋಕದಲ್ಲಿ ಸಮಯವು ಬಹಳ ನಿಧಾನವಾಗಿ ಸಾಗುತ್ತದೆ. ಕೆಳಗಿನ ಕೊನೆಯ ಲೋಕದಲ್ಲಿ ಅದು ವೇಗವಾಗಿ ಸಾಗುತ್ತದೆ. ನಾವು ಕೆಳಗೆ ಬಂದಂತೆಲ್ಲಾ ಅದು ತುಂಬಾ ವೇಗವಾಗಿ ಚಲಿಸುತ್ತದೆ. ಇದು ಬಹಳ ಆಸಕ್ತಿಕರವಾದ ಅಂಶ. ಈ ಭೂಮಿಯ ಮೇಲೆ, ಸತ್ಯ ಯುಗದಲ್ಲಿ, ಸಮಯವು ನಿಧಾನವಾಗಿ ಚಲಿಸುತ್ತದೆ, ಮತ್ತು ಕಲಿ ಯುಗದಲ್ಲಿ, ಅದು ವೇಗವಾಗಿ ಸಾಗುತ್ತದೆ. ನಮಗೆ ಇದರ ಅನುಭವ ಆಗುತ್ತಿದೆ, 2006ನೇ ವರ್ಷ ಎಲ್ಲಿದೆ? ಅದು ಬಹುತೇಕ ಕೊನೆಯಲ್ಲಿದೆ. ಅದು ಹೇಗಿದೆಯೆಂದರೆ, ನಾವು ನೆನ್ನೆಯಷ್ಟೇ 'ಹ್ಯಾಪಿ ನ್ಯೂ ಇಯರ್' ಹೇಳಿದ ಹಾಗಿದೆ, ಆದರೆ ನಾವು ಆಗಲೇ ಮುಂದಿನ ಹೊಸ ವರ್ಷದ ಬಳಿಯಲ್ಲಿದ್ದೇವೆ. ಸಮಯವು ವೇಗವಾಗಿ ಸಾಗುತ್ತಿದೆ. ಸಮಯವನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟ, ಆದರೆ ಅದು ನಿಜಾಂಶ. ವಿಶ್ವಾಮಿತ್ರ ಮಹರ್ಷಿಯಂತಹ ಮಾಸ್ಟರ್‌ಗಳು ಕೆಲವೊಮ್ಮೆ, ಬೇಕಾಗಿದ್ದ ಅಥವಾ ಸಂಕಲ್ಪಿತವಾದ ಸಮಯದ ವೇಗಕ್ಕಿಂತ ಹೆಚ್ಚು ವೇಗವಾಗಿ ಸಾಗುವಂತೆ ಮಾಡುತ್ತಾರೆ. ಇಲ್ಲಿ ಒಂದು ಗೋಳ ಇದೆ. ಅದು ಚಲಿಸುತ್ತದೆ. ಅದೇ ಸಮಯ ಮತ್ತು ವೇಗ. ಪ್ರತಿಯೊಬ್ಬ ವ್ಯಕ್ತಿಗೂ ಮತ್ತು ಪ್ರತಿ ಭೂಮಿ ಅಥವಾ ಪ್ರತಿ ಸ್ಥಳಕ್ಕೂ ಸಮಯದ ಗೋಳವೊಂದು ಇರುತ್ತದೆ. ತಪೋನಗರಕ್ಕೆ ಅದರದೇ ಆದ ಒಂದು ಗೋಳ ಇದೆ. ಒಮ್ಮೆ ವಿಶ್ವಾಮಿತ್ರರು ಬಂದು ಅದು ಬೇಗ ಚಲಿಸುವಂತೆ ಮಾಡಿದರು. ಸ್ವಲ್ಪ ಸಮಯದ ನಂತರ ಅವರು ಬಂದಾಗ, ಹಿಂದಿನ ಚಲನೆಯ ವೇಗಕ್ಕೇ ಹಿಂದಿರುಗೋಣ ಎಂದು ಅವರು ಹೇಳಿದರು. ಹಾಗೆ ಅವರು ಮಾಡಿದ್ದನ್ನು ನಾನು ನೋಡಿದೆ. ಇದನ್ನು ವಿವರಿಸಲು ಬಹಳ ಕಷ್ಟ. ಅದನ್ನು ಅವರು ಹಿಂದೆ ಇದ್ದ ವೇಗಕ್ಕೆ ತಂದರು. ನಾವು ಅರ್ಥ ಮಾಡಿಕೊಳ್ಳಬೇಕಾಗಿರುವುದು ಬಹಳಷ್ಟಿದೆ ಮತ್ತು ಅವೆಲ್ಲ ಆಸಕ್ತಿಕರವಾಗಿರುತ್ತವೆ.

ಈ ರೀತಿಯ ಯುಗಗಳು, ಸತ್ಯ ಯುಗದಿಂದ ಕಲಿಯುಗದವರೆಗೆ, ಭೂಲೋಕದಲ್ಲಿ ಮಾತ್ರ ಇದೆ, ಬೇರೆಲ್ಲೂ ಇಲ್ಲ. ಯುಗದಿಂದ ಯುಗಕ್ಕೆ ಎಲ್ಲವೂ ಬದಲಾಗುತ್ತದೆ. ಸತ್ಯ ಯುಗ ಮತ್ತು ಕಲಿ ಯುಗ ಎರಡೂ ವಿರುದ್ಧವಾದವು ಮತ್ತು ಎರಡು ಕೊನೆಗಳು. ನಮ್ಮ ಭೌತಿಕ ದೇಹದ ಗಾತ್ರದಲ್ಲಿ ಬದಲಾಗುತ್ತದೆ. ಅದು ಸತ್ಯ ಯುಗದಲ್ಲಿ ಬೇರೆ; ಕಲಿ ಯುಗದಲ್ಲಿ ಬೇರೆ. ದೇಹದ ಗಾತ್ರ, ಸಾಮರ್ಥ್ಯ, ದೇಹದ ಸೌಂದರ್ಯ ಕೂಡ ಬದಲಾಗುತ್ತದೆ. ಈ ದೇಹವನ್ನು ಉಳಿಸಿಕೊಳ್ಳುವ ಬಗ್ಗೆ ಯಾರೋ ಚರ್ಚಿಸುತ್ತಿರುವಾಗ, ಅಮರರವರು ಹೇಳಿದರು, "ನೀವು ಸತ್ಯ ಯುಗದ ದೇಹವನ್ನು ನೋಡಿದಾಗ ತಕ್ಷಣ ಈ ದೇಹವನ್ನು ಎಸೆದು ಅದರಲ್ಲಿ ವಾಸಿಸುವಿರಿ." ಇದಾದ ನಂತರ ಅವರು ಹೇಳಿದರು, "ನೀವು ಶಂಬಲಗೆ ಭೇಟಿ ಕೊಡಬೇಕು." ಶಂಬಲದಲ್ಲಿ ಎಲ್ಲ ವಯಸ್ಸಿನವರು ಜೀವಿಸುತ್ತಾರೆ. ಯುಗದಿಂದ ಯುಗಕ್ಕೆ ಮನಸ್ಸಿನ ಮತ್ತು ಬುದ್ಧಿಯ ಸಾಮರ್ಥ್ಯಗಳು ಬದಲಾಗುತ್ತವೆ. ಸತ್ಯ ಯುಗದಲ್ಲಿ ಅವು ಉನ್ನತ ಮಟ್ಟದಲ್ಲಿರುತ್ತವೆ; ಕಲಿ ಯುಗದಲ್ಲಿ ಕೆಳ ಮಟ್ಟದಲ್ಲಿರುತ್ತವೆ. ಶಕ್ತಿಗಳು, ಪ್ರಕೃತಿ, ವಾಯುಗುಣ, ನೈತಿಕತೆಗಳು, ಸಾಮಾಜಿಕ ರಚನೆಗಳು ಮತ್ತು ಖಂಡಿತವಾಗಿ ಆಡಳಿತ ಮತ್ತು ಅನೇಕ, ಅನೇಕ ವಿಷಯಗಳು ಬದಲಾಗುತ್ತವೆ. ಈ ವಿಷಯಗಳಲ್ಲಿ ಕೆಲವನ್ನು ಆತ್ಮದ ಅವರೋಹಣಕ್ಕೆ ಸೇರಿಸಿ ಮತ್ತು ಪುಸ್ತಕವನ್ನು ಮತ್ತೊಮ್ಮೆ ಓದಿ. ಅದು ತುಂಬಾ ಆಸಕ್ತಿದಾಯಕವಾಗಿರುತ್ತದೆ.

ಬೆಳಕನ್ನು ಚಾನೆಲ್ ಮಾಡುವಾಗ, ಚೈತನ್ಯಗಳನ್ನು ಹಾಗೂ ಜ್ಞಾನವನ್ನು ನಾವು ಚಾನೆಲ್ ಮಾಡುತ್ತೇವೆ. ಅದಕ್ಕಾಗಿಯೇ ಇದು ಮಹತ್ವದ ಕೆಲಸವಾಗಿದೆ. ನಿಮಗೆ ನೆನಪಿರಲಿ ನೀವು ಅಮೋಘವಾದ ಕೆಲಸದಲ್ಲಿ ಭಾಗಿಯಾಗಿರುವಿರಿ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಕಾಂಚನಲತಾ

12 ಡಿಸೆಂಬರ್ 2021

ಇದೊಂದು ಕಠಿಣವಾದ ವರ್ಷವಾಗಿದೆ. ಪಿಡುಗಿನ ಹಲವಾರು ಅಲೆಗಳು ಬಂದವು ಮತ್ತು ಈಗಲೂ ಅಲೆಗಳು ಬರುತ್ತಲೇ ಇವೆ. ಪಾಶ್ಚಾತ್ಯ ಜಗತ್ತಿನಲ್ಲಿ, ಈಗಲೂ ಪಿಡುಗು ಉತ್ಕಟವಾಗುತ್ತಿದೆ. ಅಲ್ಲಿ ಅಷ್ಟೊಂದು ಆಗುತ್ತಿರುವಾಗ, ಅದನ್ನು ನಾವು ಇಲ್ಲಿ ಭಾರತದಲ್ಲಿಯೂ ನಿರೀಕ್ಷಿಸಬಹುದು. ವಿನಾಶಕಾರಿಯಾದ ಎರಡನೇ ಅಲೆಯನ್ನು ನಾವು ಎದುರಿಸಿದೆವು ಮತ್ತು ಈಗ ಮತ್ತೊಂದು ಅಲೆ ನಿರೀಕ್ಷೆಯಲ್ಲಿದೆ. ಈ ಪಿಡುಗು ಅದರದೇ ಆದ ಸವಾಲುಗಳನ್ನು ತಂದಿದೆ ಮತ್ತು ನಾವು ನಮ್ಮ ಸುತ್ತಲಿನ ಜೀವನವನ್ನು ಗಮನಿಸಿದರೆ, ಪಿಡುಗಿನ ಹೊರತಾಗಿಯೂ ಇನ್ನೂ ಅನೇಕ ಬೇರೆ ಬೇರೆ ಸವಾಲುಗಳನ್ನು ವಿವಿಧ ಮಟ್ಟಗಳಲ್ಲಿ ಎದುರಿಸುತ್ತಿರುವುದನ್ನು ನೋಡಬಹುದು. ಗುರೂಜಿಯವರು ತೀವ್ರ ಮಂಥನದ (churning) ಬಗ್ಗೆ ಮಾತನಾಡುತ್ತಿದ್ದರು. ಈ ತೀವ್ರ ಮಂಥನವನ್ನು ನಾವು ಕಳೆದ ಹಲವಾರು ವರ್ಷಗಳಿಂದ ಗಮನಿಸುತ್ತಿದ್ದೇವೆ ಮತ್ತು ಈಗ ಮಂಥನದ ತೀವ್ರತೆ ದಿನೇ ದಿನೇ ಹೆಚ್ಚುತ್ತಿರುವುದನ್ನೇ ನೋಡುತ್ತಿದ್ದೇವೆ.

ಇದರಿಂದ ವಿರಾಮ ದೊರೆಯುವುದೇ? ಖಂಡಿತವಾಗಿ, ನಾವು ಸದಾ ಆಶಿಸುತ್ತೇವೆ. ಆಶಿಸುವುದು ಮಾನವ ಸಹಜ ಗುಣ ಮತ್ತು ಖಂಡಿತವಾಗಿಯೂ ಆಶಿಸುವುದು ಒಳ್ಳೆಯದೇ. ಆದರೆ, ತನ್ನ ಉದ್ದೇಶವಾದ ಶುದ್ಧೀಕರಣವನ್ನು ಸಾಧಿಸುವವರೆಗೂ ಈ ಮಂಥನವು ನಿಲ್ಲುವುದಿಲ್ಲ. ನಾವು ಪ್ರತಿಯೊಬ್ಬರೂ ಒಂದಲ್ಲಾ ಒಂದು ರೀತಿಯಲ್ಲಿ ಬಾಧೆಗೊಳಗಾಗಿದ್ದೇವೆ. ವ್ಯಕ್ತಿಯಿಂದ ವ್ಯಕ್ತಿಗೆ ಆ ತೀವ್ರತೆಯಲ್ಲಿ ಬದಲಾವಣೆ ಇರಬಹುದು ಆದರೆ ಅದು ಪ್ರತಿಯೊಬ್ಬರನ್ನೂ ತಟ್ಟಿದೆ.

ಇಲ್ಲಿ ಕೇವಲ ಕೆಟ್ಟ ಸಂಗತಿಗಳು ಮಾತ್ರ ನಡೆದಿಲ್ಲ, ಒಳ್ಳೆಯ ಸಂಗತಿಗಳೂ ಇವೆ. ಉದ್ಯೋಗಾವಕಾಶಗಳು ಹೆಚ್ಚಿವೆ. ಸಮೃದ್ಧಿ ಇದೆ. ಜನರ ಜೀವನದಲ್ಲಿ ಸಂತೋಷದಾಯಕ ಘಟನೆಗಳಿವೆ. ಪ್ರಳಯವು ಅದ್ಭುತವಾದ ಕೊಡುಗೆ ಮತ್ತು ಅವಕಾಶಗಳನ್ನು ತರುತ್ತದೆ. ಇದೂ ಕೂಡ ಒಂದು ವಾಸ್ತವ. ಆಧ್ಯಾತ್ಮಿಕ ಮಟ್ಟದಲ್ಲಿಯೂ ಸಹ ಹೆಚ್ಚು ಜಾಗೃತಿ ಮೂಡಿದೆ. ಸಮತಲ ಮಟ್ಟದ ಜೀವನವಲ್ಲದೇ ಬೇರೇನೋ ಇದೆ ಎಂಬುದು ಜನರಿಗೆ ಅರ್ಥವಾಗಿದೆ. ಇವುಗಳೆಲ್ಲ ಪ್ರಳಯ ತಂದ ಸಕಾರಾತ್ಮಕ ವಿಚಾರಗಳು.

ನಮ್ಮೆಲ್ಲರಿಗೂ ಇದರಿಂದ ಒಂದು ಪಾಠ ಇದೆಯೇ? ಖಂಡಿತವಾಗಿ, ಇಲ್ಲೊಂದು ಪಾಠವಿದೆ, ಒಂದು ಸಂದೇಶವಿದೆ. ಇದು ಅದೇ ಸಂದೇಶ – ಆಧ್ಯಾತ್ಮಿಕವಾಗುವುದು, ಬೆಳಕನ್ನು ಆಯ್ಕೆ ಮಾಡಿಕೊಳ್ಳುವುದು. ಪ್ರಳಯದ ತೀವ್ರತೆ ಕೇವಲ ಹೆಚ್ಚಾಗುತ್ತಲೇ ಇರುವುದು ವಾಸ್ತವದಲ್ಲಿ ಸೂಚಿಸುವುದೇನೆಂದರೆ, ನಿರೀಕ್ಷಿಸಲಾಗಿರುವ ಪರಿವರ್ತನೆ, ನಿರೀಕ್ಷಿಸಲಾಗಿರುವ ಸಾಮೂಹಿಕ ಪರಿವರ್ತನೆ ಇನ್ನೂ ಸಂಭವಿಸಿಲ್ಲ. ನವ ಯುಗದ ಸ್ಥಾಪನೆಯಾಗಲು ಅಗತ್ಯವಿರುವಷ್ಟು ಹಂತಕ್ಕೆ ಅದು ಇನ್ನೂ ಆಗಿಲ್ಲ. ಶುದ್ಧೀಕರಣದ ಪ್ರಕ್ರಿಯೆ ಮುಗಿಯುವವರೆಗೂ ಈ ಮಂಥನ ಮತ್ತು ಪ್ರಳಯದ ತೀವ್ರತೆಯು ಮುಂದುವರೆಯುತ್ತದೆ ಎಂದು ನಾವು ಅರ್ಥ ಮಾಡಿಕೊಂಡಿದ್ದೇವೆ. ಮತ್ತು ಅದು ಎಲ್ಲಾ ಮಟ್ಟಗಳಲ್ಲೂ ಪೂರ್ಣಗೊಳ್ಳಬೇಕು ಹಾಗೂ ಅತಿ ಮುಖ್ಯವಾಗಿ ವೈಯಕ್ತಿಕ ಮಟ್ಟದಲ್ಲಿ. ಇದು ಗಣನೀಯ ಸಂಖ್ಯೆಯಲ್ಲಿ ಆದರೆ, ಆಗ ಸಹಜವಾಗಿ ಇದು ಇತರ ಮಟ್ಟಗಳಿಗೆ ತಲುಪುತ್ತದೆ. ಹಾಗಾಗಿ ವೈಯಕ್ತಿಕ ಮಟ್ಟವು ಬಹಳ ಮುಖ್ಯವಾದ ಮಟ್ಟ. ವೈಯಕ್ತಿಕ ಮಟ್ಟದಲ್ಲಿ ಶಾಂತಿ ಇದ್ದರೆ, ಆಗ ಕುಟುಂಬಗಳಲ್ಲಿ, ಸಮಾಜಗಳಲ್ಲಿ ಶಾಂತಿ ಇರುತ್ತದೆ ಮತ್ತು ಅದು ದೇಶಗಳಿಗೆ ಹರಡಿ ನಂತರ ನಿಧಾನವಾಗಿ ಇಡೀ ಪ್ರಪಂಚಕ್ಕೆ ಹರಡುತ್ತದೆ. ಇದು ಜರುಗುತ್ತದೆ. ಇದು ನವಯುಗದ ಕಡೆಗಿನ ನಡಿಗೆ ಎಂದು ಭವಿಷ್ಯವನ್ನು ನೋಡಿರುವ, ಭೂತಕಾಲವನ್ನು ನೋಡಿರುವ ಮಾಸ್ಟರ್ಸ್ ನಮಗೆ ಹೇಳಿದ್ದಾರೆ. ಆದ್ದರಿಂದ ಇದು ಜರುಗುತ್ತದೆ.

ಪ್ರಳಯವು ಹಂತವೊಂದಕ್ಕೆ 7 ವರ್ಷಗಳಂತೆ 7 ಹಂತಗಳನ್ನು ಹೊಂದಿದೆ ಮತ್ತು ಇದು 1987ರಲ್ಲಿ ಆರಂಭವಾಯಿತು ಎಂದು ಮಹರ್ಷಿ ಅಮರರವರು ಉಲ್ಲೇಖಿಸಿದ್ದಾರೆ. ಹಾಗಾಗಿ, 1987ರಿಂದ 49 ವರ್ಷಗಳನ್ನು ನೀವು ಲೆಕ್ಕಾಚಾರ ಹಾಕಿದರೆ, ಅದು 2036ಕ್ಕೆ ಬರುತ್ತದೆ. ಅಲ್ಲಿಯವರೆಗೂ ಪ್ರಳಯ ಮುಂದುವರೆಯುತ್ತದೆ. ಆದ್ದರಿಂದ ಈ ಮಂಥನವೂ ಮುಂದುವರೆಯುತ್ತದೆ.

ಈ ಭೂಮಿಯ ಭವಿಷ್ಯ ನಮ್ಮ ಕೈಯಲ್ಲಿದೆ ಎಂಬುದು ವಾಸ್ತವ. "ನಮ್ಮ ಕೈಯಲ್ಲಿ" ಎಂದು ನಾನು ಹೇಳಿದಾಗ, ಅದು ಕೇವಲ ಇಲ್ಲಿರುವ ಜನರ ಬಗ್ಗೆ ಅಲ್ಲ, ಪ್ರತಿ ಒಬ್ಬರೂ, ಜಗತ್ತಿನ ಎಲ್ಲಾ ಜನರೂ ಎಂದು ನನ್ನ ಮಾತಿನ ಅರ್ಥ. ಇದು ನಮ್ಮ ಕೈಯಲ್ಲೇ ಇದೆ ಮತ್ತು ಆಸ್ಟ್ರಲ್ ಜಗತ್ತಿನ ಮಾಸ್ಟರ್ಸ್‌ಗಳಿಂದ, ಕಾಣದ ಶಕ್ತಿಗಳಿಂದ ನಮಗೆ ಸಹಾಯ ಇದೆ, ಬೆಂಬಲ ಇದೆ. ಈ ಕಷ್ಟದ ಸಮಯವನ್ನು ಜಯಿಸಿ ಬರಲು ಅವರು ನಮಗೆ ಜ್ಞಾನ, ಚೈತನ್ಯ ಮತ್ತು ಶಕ್ತಿಯನ್ನು ನೀಡುತ್ತಾ ಸಹಾಯ ಮಾಡುತ್ತಿದ್ದಾರೆ. ಅವರು ಬಹಳಷ್ಟು ಮಾಡುತ್ತಾರೆ. ಆದರೆ ಅವರು ಕೆಲವು ನಿಯಮಗಳ ಅಧೀನದಲ್ಲಿರುತ್ತಾರೆ. ಒಳ್ಳೆಯದನ್ನೂ ಕೂಡ ಹೇರಲಾಗುವುದಿಲ್ಲ. ಮಾಸ್ಟರ್ಸ್ ಕೊಡುವ ಸಲಹೆಗಳನ್ನು ಈ ಜಗತ್ತಿನ ಜನ ಒಪ್ಪಿಕೊಳ್ಳಬೇಕು. ಅವರು ಸಲಹೆ ನೀಡಿದ ಮಾರ್ಗಗಳನ್ನು ನಾವು ಅನುಸರಿಸಬೇಕಾಗುತ್ತದೆ. ಜನರು ಆಯ್ಕೆ ಮಾಡಿಕೊಳ್ಳಬೇಕು. ಅದೇ ಸಂದೇಶ. ನಾವು ಪರಿಸ್ಥಿತಿಗಳನ್ನು ಒಪ್ಪಿಕೊಳ್ಳಬೇಕು, ಜನರನ್ನು ಅವರು ಹೇಗಿದ್ದಾರೆಯೋ ಹಾಗೆ, ಅವರ ಎಲ್ಲಾ ದೋಷಗಳ (ಅಪೂರ್ಣತೆಗಳ) ಸಹಿತ ಒಪ್ಪಿಕೊಳ್ಳಬೇಕು. ನಾವು ಅಂತರ್ಮುಖಿಗಳಾಗಬೇಕು, ಇತರರ ಬೆಳವಣಿಗೆಯ ಬಗ್ಗೆ ಚಿಂತೆ ಮಾಡುವುದಕ್ಕಿಂತ ನಮ್ಮ ಬೆಳವಣಿಗೆಗೆ ಗಮನ ಕೊಡಬೇಕು. ಈ ನಕಾರಾತ್ಮಕ ಅಲೆಯು ಅನೇಕ ಸಮಸ್ಯೆಗಳನ್ನು ಉಂಟು ಮಾಡಬಹುದು, ವಿನಾಶವನ್ನು ಕೂಡ. ಆದರೆ, ನಾನು ಹೇಳಿದಂತೆ, ಮಾಸ್ಟರ್ಸ್ ತಮಗೆ ಸಾಧ್ಯವಿರುವುದೆಲ್ಲವನ್ನೂ ಮಾಡುತ್ತಾರೆ.

ಮತ್ತು ಗುರೂಜಿಯವರು ಏನು ಹೇಳಿದ್ದರು ಎಂಬುದನ್ನು ನಾನು ನೆನಪುಮಾಡಿಕೊಡಲು ಇಚ್ಛಿಸುತ್ತೇನೆ. "ಇದು ಹೊಡೆದಾಟವನ್ನು ತಪ್ಪಿಸಬೇಕಾದ, ಸಂಘರ್ಷಗಳನ್ನು ತಪ್ಪಿಸಬೇಕಾದ ಸಮಯ. ಇದು ಬೆಳಕಿನಲ್ಲಿ ಜೀವಿಸಲು ನಿರ್ಣಯ ಮಾಡುವ ಸಮಯ." ಎಂದು ಹೇಳಿದ್ದರು. ಬಹುಶಃ ನಾವು ಹೊಸ ವರ್ಷವನ್ನು ಈ ರೀತಿಯಾಗಿ ಆರಂಭಿಸಲು ನಿರೀಕ್ಷಿಸಿದಂತಿದೆ. ಹೊಸ ವರ್ಷವು ಹೊಸ ಚೈತನ್ಯಗಳನ್ನು, ಹೊಸ ಅವಕಾಶಗಳನ್ನು ಮತ್ತು ಹೊಸ ಭರವಸೆಯನ್ನು ನಮ್ಮೆಲ್ಲರಿಗೂ ತರಲಿದೆ. ನಾವು ಈ ಹೊಸ ಚೈತನ್ಯಗಳೊಂದಿಗೆ ಹೊಂದಿಕೊಳ್ಳಬೇಕು.

02–01–2022

ಹೊಸ ಚೈತನ್ಯಗಳು ಹೆಚ್ಚು ಭರವಸೆಯನ್ನು ತರುತ್ತವೆ, ಹೊಸ ಅವಕಾಶಗಳನ್ನು ತರುತ್ತವೆ. ಇದು ನಾವು ಹೊತ್ತಿರಬಹುದಾದ ಹೊರೆಯನ್ನು ಹೊರ ಹಾಕಲು ಅತ್ಯುತ್ತಮವಾದ ಸಮಯ. ಇದು, ಕ್ಷಮಿಸಿ ಮುನ್ನಡೆಯಲು ಅತ್ಯುತ್ತಮವಾದ ಸಮಯ. ನಾವು ಯಾವಾಗ ಹೊರೆರಹಿತವಾಗುತ್ತೇವೆಯೋ, ನಾವು ಹಳೆಯ ಗಾಯ ಮತ್ತು ನೋವುಗಳ ಭಾವನಾತ್ಮಕ ತೊಡರುಗಳಿಂದ ಬಿಡಿಸಿಕೊಳ್ಳುತ್ತೇವೆಯೋ, ಆಗ ನಾವು ಹೊಸ ಸಾಧ್ಯತೆಗಳನ್ನು ಅನುಭವಿಸಬಹುದು. ನವ ಜಗತ್ತು ಪ್ರೀತಿಯ ಮಳೆ ಸುರಿಸಲು ಕಾಯುತ್ತಿದೆ. ನಮ್ಮನ್ನು ಸಮೃದ್ಧತೆಯಿಂದ ಹಾರೈಸಲು ಕಾಯುತ್ತಿದೆ.

ನಮ್ಮ ಅಹಂ ಈ ಹೊರೆಯನ್ನು ಆನಂದಿಸುವ ಸಾಧ್ಯತೆಯಿದೆ ಏಕೆಂದರೆ ಹೊರೆಯು ಅಹಂಗೆ ಒಂದು ಬದುಕು ನೀಡುತ್ತದೆ. ಹೊರೆಯು ಅಹಂಗೆ ಬದುಕುಳಿಯಲು ಸಹಾಯ ಮಾಡುತ್ತದೆ. ಒಮ್ಮೆ ನಾವು ಹೊರೆಯನ್ನು ಹೊರಗೆ ಎಸೆದರೆ, ಗರ್ವಕ್ಕೆ ಯಾವುದೇ ಆಶ್ರಯ ಇರುವುದಿಲ್ಲ ಮತ್ತು ಅದು ನಾಶವಾಗುತ್ತದೆ. ಹಾಗಾಗಿ, ಅಹಂ ತನ್ನ ಉಳಿವಿಗಾಗಿ, ಹೊರೆಗೆ ಒತ್ತಾಸೆಯಾಗಿರಲು ನಮಗೆ ಹೇಳುತ್ತದೆ.

ಈ ಹೊರೆಯನ್ನು ನಾವು ಗುರುತಿಸಬೇಕು ಮತ್ತು ನಮ್ಮನ್ನು ನಾವು ಬಿಡುಗಡೆಗೊಳಿಸಿಕೊಳ್ಳಬೇಕು. ನಂತರ ನಾವು ಹಗುರಾದ ಭಾವ ಹೊಂದುತ್ತೇವೆ. ಮತ್ತು ಆಗ ತನ್ನ ಅನುಗ್ರಹವನ್ನು ನಮ್ಮ ಮೇಲೆ ಸುರಿಸಲು ಕಾಯುತ್ತಿರುವ ನವ ಜಗತ್ತಿನ ಕಡೆಗೆ ನಡೆಯಬಹುದು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು –ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫೀಯು ರೂ. 4500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀಯು ರೂ. 3500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಮಹರ್ಷಿ ಅಮರ

**ವೈಶಾಲಿ ಜೋಷಿ; ಅನು: ಕಾಂಚನಲತ**

ಮಾನವ ಕುಲದ ಆಧ್ಯಾತ್ಮಿಕ ಬೆಳವಣಿಗೆಗೆ ಸಹಾಯ ಮಾಡಲು, ವಿವಿಧ ಕಾಲಘಟ್ಟಗಳಲ್ಲಿ ಮಹರ್ಷಿ ಅಮರರವರು ಲೆಕ್ಕವಿಲ್ಲದಷ್ಟು ಬಾರಿ ಈ ಭೂಮಿಗೆ ಇಳಿದು ಬಂದಿದ್ದಾರೆ. ಪ್ರತಿ ಜನ್ಮದಲ್ಲೂ, ಆಯಾ ನಿರ್ದಿಷ್ಟ ಕಾಲಕ್ಕೆ ಮಾನವನಿಗೆ ಅಗತ್ಯವಾದ ಜ್ಞಾನವನ್ನು ಕೆಳ ತಂದಿದ್ದಾರೆ.

ಅಮರ ಮಹರ್ಷಿಯಾಗಿ ಬಂದಾಗಿನ ಅವರ ಕಾಲಾವಧಿಯಲ್ಲಿ, ಋಷಿಗಳ ಅಸ್ತಿತ್ವದ ಬಗ್ಗೆ ಮತ್ತು ಮಾನವ ಜನಾಂಗದ ಬಗ್ಗೆ ಅವರಿಗಿರುವ ಒಲವು ಮತ್ತು ಕಾಳಜಿಯ ಬಗ್ಗೆ ನಾವು ತಿಳಿದುಕೊಂಡಿದ್ದೇವೆ. ಋಷಿಗಳು ಈ ಸೃಷ್ಟಿಯ ನಿರ್ವಹಣೆಯಲ್ಲಿ ಆಳವಾಗಿ ತೊಡಗಿಸಿಕೊಂಡಿದ್ದಾರೆ ಮತ್ತು ನಾವು ಇಲ್ಲಿ ಸರಿಯಾದ ಜೀವನವನ್ನು ನಡೆಸಿ, ನಮ್ಮ ಮೂಲಕ್ಕೆ ಹಿಂದಿರುಗಲು ನಮಗೆ ಬೇಕಾದ ಸಹಾಯ, ಚೈತನ್ಯ ಮತ್ತು ಇಲ್ಲಿ ಜೀವನ ಮಾಡಲು ನಡೆಸುವ ಹೋರಾಟಕ್ಕೆ ಮತ್ತು ಪ್ರಯತ್ನಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ ಎಂದು ತಿಳಿದುಕೊಂಡಿದ್ದೇವೆ.

ಅವರ ಜೀವನವು ಋಷಿಗಳ ಕಾರ್ಯಕ್ಕೆ ಮುಡಿಪಾಗಿತ್ತು. ಅವರು, ಆಧ್ಯಾತ್ಮಿಕ ಅಥವಾ ಲೌಕಿಕ ಮಾರ್ಗದರ್ಶನಕ್ಕೆ ತಮ್ಮ ಬಳಿ ಬಂದ ಪ್ರತಿ ಒಬ್ಬ ವ್ಯಕ್ತಿಗೂ ಮಾರ್ಗದರ್ಶನ ನೀಡಿದರು ಆದರೆ ಅವರು ಜೀವಿಸಿದ್ದಾಗ ಹೆಚ್ಚು ಜನ ಅವರನ್ನು ಅರ್ಥ ಮಾಡಿಕೊಳ್ಳಲಿಲ್ಲ. ಅನೇಕರು ಯಕ್ಷ ಕಥೆಗಳಂತಿದ್ದ ಅವರ ಅತೀಂದ್ರಿಯ ಸಾಹಸ ಕಥೆಗಳನ್ನು ಕೇಳಿಸಿಕೊಳ್ಳಲು ಮಾತ್ರವೇ ಅವರ ಬಳಿ ಬರುತ್ತಿದ್ದರು. ಆದರೆ, ಅವರು ಪ್ರಚಾರದಿಂದ ದೂರವಿದ್ದುಕೊಂಡು, ಅವರನ್ನು ಜನರು ಯಾವ ರೀತಿ ಸ್ವೀಕರಿಸುತ್ತಾರೆ ಎಂಬುದರ ಬಗ್ಗೆ ಗಮನ ಕೊಡದೆ ತಮ್ಮ ಕೆಲಸವನ್ನು ಮೌನವಾಗಿ ನಡೆಸಿಕೊಂಡು ಹೋದರು.

ಅವರು ಋಷಿಗಳಿಗೆ ಸಂಪೂರ್ಣ ಶರಣಾಗತರಾಗಿ ಜೀವನವನ್ನು ನಡೆಸಿದ್ದರು. ಒಂದು ಇಡೀ ದಿನ ಒಂದು ಮಣೆಯ ಮೇಲೆ ಕುಳಿತುಕೊಳ್ಳುವಂತಹ, ಋಷಿಗಳ ಪ್ರತಿಯೊಂದು ಸೂಚನೆಯನ್ನೂ ಯಾವುದೇ ಪ್ರಶ್ನೆ ಮಾಡದೆ ಸಂಪೂರ್ಣವಾಗಿ ಪಾಲಿಸುತ್ತಿದ್ದರು. "ದೇವರಿಗೆ ಶರಣಾಗಲು ನಮಗೆ ಎಷ್ಟು ಸಮಯ ಬೇಕು?" ಎಂದು ಯಾರಾದರೂ ಅವರನ್ನು ಕೇಳಿದರೆ, "ಕೇವಲ ಒಂದೇ ಒಂದು ಕ್ಷಣ ಬೇಕಾಗುತ್ತದೆ" ಎಂದು ಹೇಳುತ್ತಿದ್ದರು.

ಒಮ್ಮೆ ಸಮುದ್ರ ದೇವತೆಯು, ಅವರ ಅತೀಂದ್ರಿಯ ಕೆಲಸವೊಂದನ್ನು ಮೆಚ್ಚಿ, ಅವರಿಗೆ ಒಂದು ಶಕ್ತಿಯುತವಾದ ದಂಡವನ್ನು ನೀಡಿದಾಗ, ಅದನ್ನು, ಈ ಭೂಮಿಯ ಮೇಲ್ವಿಚಾರಕರಾಗಿದ್ದ ಮಾರ್ಕಂಡೇಯ ಮಹರ್ಷಿಗಳಿಗೆ ವರ್ಗಾಯಿಸಿದರು. ಇದು ಅವರಿಗೆ ಕೊಡುಗೆಯಾಗಿ ದೊರೆತದ್ದರಿಂದ, ಅವರ ಬಳಿಯೇ ಇರಿಸಿಕೊಳ್ಳಲು ಮಹರ್ಷಿಗಳು ಹೇಳಿದಾಗ, ಅದು ಮಹರ್ಷಿಗಳ ಬಳಿಯೇ ಇರತಕ್ಕದ್ದು ಎಂದು ಅಮರರವರು ಹೇಳಿದರು. ದೈವ ಸಂಕಲ್ಪದ ಪರಿಪೂರ್ಣ ಉಪಕರಣವಾಗಿದ್ದ ಅವರು, ಅದನ್ನು ತಮ್ಮ ಬಳಿ ಇರಿಸಿಕೊಳ್ಳಲು ಇಚ್ಛಿಸಲಿಲ್ಲ. ಅವರ ಬಳಿ ಅಪಾರವಾದ ಶಕ್ತಿಗಳಿದ್ದವು, ಆದರೆ ಅವರು, "ಎಲ್ಲಾ ಶಕ್ತಿಗಳು ದೇವರೊಂದಿಗಿರಲಿ ಮತ್ತು ದೇವರು ನಮ್ಮೊಂದಿಗಿರಲಿ" ಎಂದು ಹೇಳಿದರು. ಎಂತಹ ಅಗಾಧತೆ! ■

## ಅಮರ : ಕತ್ತಲಿನಿಂದ ಬೆಳಕಿನೆಡೆಗೆ

**ಅಪೂರ್ವ ದೇಶ್‌ಪಾಂಡೆ; ಅನು: ಕಾಂಚನಲತಾ**

ನಾನು ಇತ್ತೀಚೆಗೆ ಒಂದು ಹಾಸ್ಯಮಯ ವೈಜ್ಞಾನಿಕ ಕಾದಂಬರಿಯೊಂದನ್ನು ಕೈಗೆತ್ತಿಕೊಂಡೆ. ಆ ಪುಸ್ತಕವನ್ನು ಸಂಪೂರ್ಣವಾಗಿ ಆನಂದಿಸಿದೆ, ಆದರೆ ಯಾವುದೇ ಕಾಲ್ಪನಿಕ ಪುಸ್ತಕವೂ ಅಮರರವರ ನೈಜ ಅಂತರತಾರಾ ಸಾಹಸಗಳಿಗೆ ಸಾಟಿಯಾಗುವ ಪ್ರಯತ್ನ ಕೂಡ ಮಾಡಲು ಸಾಧ್ಯವಿಲ್ಲ. ಮಹರ್ಷಿ ಅಮರರವರ ಶ್ರೇಷ್ಠತೆಯನ್ನು ಸಂಪೂರ್ಣವಾಗಿ ಗ್ರಹಿಸಲು ನಾನು ಪ್ರಾಯಶಃ ಹಲವಾರು ಜನ್ಮಗಳಿಗೂ ಮೀರಿ ಬೆಳೆಯಬೇಕು ಮತ್ತು ಆದರೂ ನಾನು ಸೋಲುವ ಸಾಧ್ಯತೆ ಇದೆ. ನಾನು ಈ ಅದ್ಭುತ ಮಾಸ್ಟರ್ ಬಗ್ಗೆ ಯೋಚಿಸಿದಾಗ, ನನ್ನ ಮನಸ್ಸಿಗೆ ಬರುವ ಒಂದು ಪದ 'ಅನಂತ'.

ನಾನು ಅಮರ ಮಹರ್ಷಿಯವರ ಬಗ್ಗೆ ಯೋಚಿಸಿದಾಗ, ಸ್ವಯಂಪ್ರೇರಿತವಾಗಿ ಗುರೂಜಿಯವರನ್ನು ಕೂಡ ನೆನಪಿಸಿಕೊಳ್ಳುತ್ತೇನೆ. ಅವರಿಬ್ಬರೂ ಒಂದೇ ಏನೋ ಮತ್ತು ಒಬ್ಬರಿಂದ ಇನ್ನೊಬ್ಬರನ್ನು ಬೇರೆ ಮಾಡಲು ಸಾಧ್ಯವಿಲ್ಲವೇನೋ ಎಂಬ ಭಾವನೆ ಬರುತ್ತದೆ. ಆದರೂ ಅವರುಗಳು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಾಪಾಡಿಕೊಳ್ಳುತ್ತಾರೆ. ಅದು ಬಹುಶಃ ಒಬ್ಬರ ಮೇಲೆ ಇನ್ನೊಬ್ಬರ ಕುರಿತಾದ ಆಳವಾದ ಪ್ರೀತಿ ಮತ್ತು ಅಮರರವರ ಕಡೆಗಿನ ಗುರೂಜಿಯವರ ನಿಷ್ಕಲ್ಮಶವಾದ ಭಕ್ತಿ ಇರಬಹುದು. ನಾನು ಚಿಕ್ಕವಳಾಗಿದ್ದಾಗ, ದೂರದರ್ಶನದ ಕಾರ್ಯಕ್ರಮವೊಂದರಲ್ಲಿ ಅತಿಮಾನುಷ ಶೂರರು ತಮ್ಮ ಶಕ್ತಿಗಳನ್ನು ಒಂದಾಗಿಸಿ ಒಂದು ಅತಿಮಾನುಷ ಶಕ್ತಿಯನ್ನು ಸೃಷ್ಟಿ ಮಾಡುತ್ತಿದ್ದುದನ್ನು ನೋಡುತ್ತಿದ್ದೆ. ನಮ್ಮ ಜೀವನದಲ್ಲಿ ಗುರೂಜಿ ಮತ್ತು ಮಹರ್ಷಿ ಅಮರರವರನ್ನು ನಾವು ಹೊಂದಿರುವುದರಿಂದ ಅದು ನಮ್ಮದೇ ಸ್ವಂತ ಅತಿಮಾನುಷ ಶಕ್ತಿಯೊಂದನ್ನು ಹೊಂದಿದಂತೆ.

ಕೆಲವು ತಿಂಗಳುಗಳ ಹಿಂದೆ, ನನ್ನ ಆಪ್ತರೊಬ್ಬರು ಅನಾರೋಗ್ಯಕ್ಕೊಳಗಾಗಿದ್ದರು. ನನಗೇ ಗೊತ್ತಾಗದಂತೆ, ಆ ಕ್ಷಣಗಳಲ್ಲಿ ಅದ್ಭುತವಾದ ಚೈತನ್ಯಗಳನ್ನು ಕಂಡುಕೊಂಡೆ. ಸ್ವೀಕರಿಸುವುದನ್ನು ಮತ್ತು ಬಿಟ್ಟುಬಿಡುವುದನ್ನು ಸಾಧ್ಯವಾಗಿಸುವ ಒಂದು ಶಕ್ತಿ. ಹಿಂದಿರುಗಿ ನೋಡಿದಾಗ, ನಾನು ಪರಿಸ್ಥಿತಿಯನ್ನು ಆ ರೀತಿಯಾಗಿ ನಿಭಾಯಿಸಿದ್ದು ನನಗೆ ಆಶ್ಚರ್ಯವೆನಿಸುತ್ತದೆ. ನನಗೆ ನೋವಾಗಲಿಲ್ಲ ಎಂದು ನಾನು ಹೇಳಲಾರೆ. ನಾನು ಅತೀವ ನೋವನ್ನು ಅನುಭವಿಸಿದೆ ಆದರೆ ಆ ನೋವನ್ನು ನಿರ್ವಹಿಸಲು, ಮಹರ್ಷಿ ಅಮರ ಮತ್ತು ನಮ್ಮ ಆತ್ಮೀಯ ಗುರೂಜಿಯವರಿಂದ ನನಗೆ ಶಕ್ತಿಯನ್ನೂ ನೀಡಲಾಯಿತು. ಮಹರ್ಷಿ ಅಮರ ಮತ್ತು ಗುರೂಜಿ ಕೃಷ್ಣಾನಂದ ಅವರಿಂದ ಅಗತ್ಯ ಸಮಯಗಳಲ್ಲಿ ದೊರೆತ ಸಹಾಯಗಳ ಬಗ್ಗೆ ಜನರ ಅನೇಕ ಅನುಭವಗಳನ್ನು ಓದಿದ್ದೇನೆ. ಅವರು ನಮಗೆ ಏಕೆ ಸಹಾಯ ಮಾಡುತ್ತಾರೆ? ಸೃಷ್ಟಿಯಲ್ಲಿ ಅವರಿಗೆ ಗಮನ ನೀಡಬೇಕಾದ ಇನ್ನೂ ಹೆಚ್ಚು ಆದ್ಯತೆಯ ಸಂಗತಿಗಳು ಬಹಳ ಇವೆ ಆದರೆ ನಮ್ಮ ಅಗತ್ಯ ಸಮಯದಲ್ಲಿ ನಮ್ಮನ್ನು ಕಾಪಾಡಲು ಬರುವಂತೆ ಮಾಡುವುದು ಅವರ ಬೇಷರತ್ತಿನ ಪ್ರೀತಿ. ನಾವು ಪ್ರತಿಯೊಮ್ಮೆ ಬಿದ್ದಾಗಲೂ ನೋವಾಗದಂತೆ ತಡೆಯುವುದು ಅವರ ಬೇಷರತ್ತಿನ ಪ್ರೀತಿ. ನಮಗೆ ನೆಲೆಯಾಗಿ ನಿಲ್ಲುವುದು ಅವರ ಬೇಷರತ್ತಿನ ಪ್ರೀತಿ. ನಮ್ಮನ್ನು ಕತ್ತಲಿನಿಂದ ಬೆಳಕಿನೆಡೆಗೆ ಕೊಂಡೊಯ್ಯುವುದೂ ಅವರ ಬೇಷರತ್ತಿನ ಪ್ರೀತಿಯೇ. ■

## ಪ್ರಶ್ನೋತ್ತರಗಳು

**ಜಯಂತ್ ದೇಶ್‌ಪಾಂಡೆ**

**ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ**

**ಪ್ರ: ದಿನವನ್ನು ಸಂಕುಚಿತಗೊಳಿಸಲಾಗಿದೆ, ಅಷ್ಟೆ ಅಲ್ಲ, ಪ್ರಳಯದ ಸಮಯವನ್ನು ಕೂಡ ಅರ್ಧದಷ್ಟು ಸಂಕುಚಿತಗೊಳಿಸಲಾಗಿದೆ, ಅಂದರೆ 432 ವರ್ಷಗಳಿಂದ ಸುಮಾರು 216 ವರ್ಷಗಳವರೆಗೆ ಕಡಿಮೆಗೊಳಿಸಲಾಗಿದೆ ಎಂದು 'Guruji Speaks' ಸರಣಿ ಪುಸ್ತಕಗಳಲ್ಲಿ ತಾವು ಓದಿದ್ದಾಗಿ ಒಬ್ಬ ವ್ಯಕ್ತಿ ಹೇಳುತ್ತಾರೆ. ಇದರ ವ್ಯಾವಹಾರಿಕವಾದ ಮಹತ್ವ ಏನು?**

ಉ: ಸಮಯವನ್ನು ಸಂಕುಚಿತಗೊಳಿಸಲಾಗಿದೆ ಎಂದು ಗುರೂಜಿ ವಿವರಿಸಿ ಹೇಳಿದ್ದಾರೆ. ಈಗ ಎಷ್ಟು ಸಂಕುಚಿತಗೊಂಡಿದೆ ಎಂಬ ನಿಖರವಾದ ಪ್ರಮಾಣ ನಮಗೆ ತಿಳಿದಿಲ್ಲ. ಆದರೆ ನಮ್ಮ ಚಟುವಟಿಕೆಗಳಿಗೆ ಹಿಂದೆ ನಮಗೆ ಇರುತ್ತಿದ್ದಷ್ಟು ಸಮಯ ಈಗ ನಮಗೆ ಇಲ್ಲವೆಂಬುದರ ಅನುಭವ ನಮ್ಮೆಲ್ಲರಿಗೂ ಆಗುತ್ತಿದೆ. ಆದ್ದರಿಂದ ಸಮಯ ಸಂಕುಚಿತಗೊಂಡಿರುವುದು ವಾಸ್ತವ ಸಂಗತಿ.

ವ್ಯಾವಹಾರಿಕ ಮಹತ್ವವೇನೆಂದರೆ, ಪ್ರಳಯದ ಈ ಕಷ್ಟದ ಅವಧಿಯನ್ನು ನಾವು ಶೀಘ್ರವಾಗಿ ಹಾದು ಹೋಗಬೇಕೆಂದು ಋಷಿಗಳು ಬಯಸುತ್ತಾರೆ. ಅದಕ್ಕಾಗಿಯೇ ಅವರು ಸಮಯದ ವೇಗವನ್ನು ಹೆಚ್ಚಿಸಿರಬಹುದು. ಇನ್ನೊಂದು ಪ್ರಾಮುಖ್ಯತೆ ಏನೆಂದರೆ, ನಮಗೆ ಸಾಕಷ್ಟು ಸಮಯವಿಲ್ಲದ ಕಾರಣ, ನಾವು ಅನಾವಶ್ಯಕ-ವಾದ ಚಟುವಟಿಕೆಗಳಿಗೆ ಗಮನ ಕೊಡದೆ, ಪರಿವರ್ತನೆಯಂತಹ ಮುಖ್ಯವಾದ ಚಟುವಟಿಕೆಗಳಿಗೆ ಹೆಚ್ಚು ಗಮನ ಹರಿಸಬೇಕು. ನಾವು ನಮ್ಮ ಸಾಧನೆಯ ಕಡೆಗೆ, ಸಕಾರಾತ್ಮಕ ಜೀವನದ ಕಡೆಗೆ ಹೆಚ್ಚು ಗಮನ ಹರಿಸಬೇಕು.

ಪ್ರಶ್ನೆ ಕೇಳಿದ ವ್ಯಕ್ತಿಯು ಪ್ರಳಯದ ಅವಧಿಯನ್ನು 216 ವರ್ಷಗಳಿಗೆ ಸಂಕುಚಿತಗೊಳಿಸಲಾಗಿದೆ ಎಂದು ಹೇಳುತ್ತಾರೆ. ಇಲ್ಲಿ ನಾನು ಸ್ಪಷ್ಟನೆ ನೀಡಲು ಬಯಸುತ್ತೇನೆ– ಕಲಿ ಯುಗದಿಂದ ಸತ್ಯ ಯುಗಕ್ಕೆ ಪರಿವರ್ತನೆಗೊಳ್ಳುವುದು ರಾತ್ರೋರಾತ್ರಿ ಸಂಭವಿಸುವುದಿಲ್ಲ. ಇದು 432 ವರ್ಷಗಳನ್ನು ತೆಗೆದುಕೊಳ್ಳುತ್ತದೆ. ಇದು ಪರಿವರ್ತನಾ ಅವಧಿ, ಇದು ಕಲಿಯುಗವು ಕೊನೆಗೊಂಡಾಗ ಮತ್ತು ಹೊಸ ಯುಗದ ಪ್ರಕ್ರಿಯೆಗಳು ಪ್ರಾರಂಭವಾದಾಗ 1974ರಲ್ಲಿ ಪ್ರಾರಂಭವಾಯಿತು. ಗುರೂಜಿಯವರು ವಿವರಿಸಿದ ಪ್ರಳಯದ ಅವಧಿಯು ವಾಸ್ತವವಾಗಿ 49 ವರ್ಷಗಳು. ವಾಸ್ತವವಾಗಿ ಪರಿವರ್ತನ ಅವಧಿ ಮತ್ತು ಪ್ರಳಯದ ಅವಧಿ ವಿಭಿನ್ನವಾಗಿದೆ. ಪ್ರಳಯವು 1987ರಲ್ಲಿ ಪ್ರಾರಂಭವಾಯಿತು. ಮತ್ತು ಈ ಪ್ರಳಯವು ತಲಾ 7 ವರ್ಷಗಳ 7 ಹಂತಗಳನ್ನು ಹೊಂದಿದೆ. ಆದ್ದರಿಂದ ನಾವು ಸುಮಾರು 34 ವರ್ಷಗಳ ಪ್ರಳಯವನ್ನು ಪೂರ್ಣಗೊಳಿಸಿದ್ದೇವೆ ಮತ್ತು ನಾವು ಈಗ ಪ್ರಳಯದ 5ನೇ ಹಂತದಲ್ಲಿ ಇದ್ದೇವೆ.

ಪರಿವರ್ತನಾ ಅವಧಿ ಕಡಿಮೆಯಾಗಿದೆಯೇ? ಅದು ಜನರನ್ನು ಅವಲಂಬಿಸಿದೆ. ಈ ಕ್ಷಣದಲ್ಲಿಯೇ, ಈ ಪ್ರಪಂಚದ ಬಹುತೇಕ ಜನರು ಹೊಸ ಯುಗಕ್ಕಾಗಿ ಕೇಳಿಕೊಂಡರೆ, ಆಗ ತಕ್ಷಣವೇ ಹೊಸ ಯುಗವನ್ನು ಕೊಡುಗೆಯಾಗಿ ನೀಡಲಾಗುತ್ತದೆ. ಆಗ ಸಹಜವಾಗಿಯೇ 432 ವರ್ಷಗಳ ಪರಿವರ್ತನಾ ಕಾಲ ಬೇಕಾಗುವುದಿಲ್ಲ.


**ಪ್ರ: ನಾವು ಪ್ರಜ್ಞಾಪೂರ್ವಕವಾಗಿ ಹೆಚ್ಚು ಕ್ಷಮಿಸುವುದು ಹೇಗೆ?**

ಉ: ನಾವು ಯಾರನ್ನಾದರೂ ಕ್ಷಮಿಸಿದಾಗ, ಸಂಪೂರ್ಣವಾಗಿ ಕ್ಷಮಿಸುತ್ತೇವೆ. ಭಾಗಶಃ ಕ್ಷಮಿಸಲು ನಮಗೆ ಸಾಧ್ಯವಿಲ್ಲ. ಭಾಗಶಃ ಕ್ಷಮಿಸುವುದು, ಕ್ಷಮೆಯೇ ಅಲ್ಲ. ಬೇರೊಬ್ಬ ವ್ಯಕ್ತಿಯೂ ದೇವರ ಭಾಗವಾಗಿದ್ದಾನೆ ಎಂದು ನಾವು ಅರ್ಥ ಮಾಡಿಕೊಂಡರೆ, ಆ ವ್ಯಕ್ತಿಯೂ ಆಧ್ಯಾತ್ಮಿಕ ವಿಕಾಸದ ಬೇರೊಂದು ಮಟ್ಟದಲ್ಲಿರಬಹುದು, ಆಗ ನಾವು ಆತನನ್ನೊ ಅಥವಾ ಆಕೆಯನ್ನೊ ಅರ್ಥ ಮಾಡಿಕೊಳ್ಳಬಹುದು, ನಂತರ ನಾವು ಸುಲಭವಾಗಿ ಕ್ಷಮಿಸಬಹುದು. ನಮ್ಮ ಸ್ವಂತ ಆಧ್ಯಾತ್ಮಿಕ ಬೆಳವಣಿಗೆಗಾಗಿ ನಾವು ಕ್ಷಮಿಸಬೇಕು ಎನ್ನುವುದನ್ನು ಕೂಡ ನಾವು ಅರ್ಥ ಮಾಡಿಕೊಳ್ಳಬೇಕು. ನಾವು ಕ್ಷಮಿಸದಿದ್ದರೆ, ನಾವು ಒಂದೇ ಹಂತದಲ್ಲಿಯೇ ಸಿಕ್ಕಿಹಾಕಿಕೊಳ್ಳುತ್ತೇವೆ. ಇತ್ತೀಚೆಗೆ ವ್ಯಕ್ತಿಯೊಬ್ಬರು ನನಗೆ ಹೇಳಿದರು, ನಾವು ದೊಡ್ಡ ಮಾತುಗಳನ್ನು ಆಡಬಹುದು, ಮತ್ತು ನಾವು ಇತರರಿಗೆ ಆಧ್ಯಾತ್ಮಿಕತೆಯ ಬಗ್ಗೆ ಉಪನ್ಯಾಸ ನೀಡಬಹುದು, ಆದರೆ ಅದನ್ನು ಪಾಲಿಸುವುದಕ್ಕೆ ಕಷ್ಟವಾಗುತ್ತದೆ. ಇದು ಕಷ್ಟ ಎಂದು ನಾನು ಒಪ್ಪುತ್ತೇನೆ, ಆದರೆ ಇದು ಎಂದಿಗೂ ಸಾಧ್ಯ. ನೋವಾಗುವುದು ಸಹಜ. ನಾವು ಅದನ್ನು ಸುಲಭವಾಗಿ ದೂರವಿಡಲು ಆಗುವುದಿಲ್ಲ. ನಮಗೆಲ್ಲರಿಗೂ ನೋವಾಗುತ್ತದೆ. ಆದರೆ, ಅದನ್ನು ಮರೆಯದಿರುವುದರಿಂದ ನಮಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಅದು ನಮ್ಮನ್ನು ಹಿಡಿದಿಡುತ್ತದೆ. ಕ್ಷಮಿಸುವುದು ನಮ್ಮನ್ನು ಬಿಡುಗಡೆ ಮಾಡುತ್ತದೆ. ತಕ್ಷಣ ಕ್ಷಮಿಸಲು ಸಾಧ್ಯವಾಗದಿರಬಹುದು, ಅದು ಸಮಯ ತೆಗೆದುಕೊಳ್ಳಬಹುದು, ಆದರೆ ಅಂತಿಮವಾಗಿ ನಾವು ಕ್ಷಮಿಸಲೇಬೇಕು ಎಂದು ನಾನು ಭಾವಿಸುತ್ತೇನೆ. ನಮಗೆ ದೇವರನ್ನು ನಂಬಲು ಸಾಧ್ಯವಾದರೆ, ನಮಗೆ ಕ್ಷಮಿಸಲು ಸಾಧ್ಯ ಎಂದು ನಾನು ಭಾವಿಸುತ್ತೇನೆ. ನಾವು ಆಧ್ಯಾತ್ಮಿಕವಾಗಿ ಬಲಿಷ್ಠರಾಗಿ ಬೆಳೆಯಬೇಕು; ಅಧ್ಯಾತ್ಮಿಕವಾಗಿ ಬೆಳೆಯುವುದೇ ಪ್ರತಿಯೊಂದಕ್ಕೂ ಪರಿಹಾರ. ಆಗ ನಾವು ದೇವರ ಸಂಪರ್ಕದಲ್ಲಿ ಇರುತ್ತೇವೆ. ಮತ್ತು ನಾವು ಹೇಗೆ ಬಲಶಾಲಿಗಳಾಗುತ್ತೇವೆ ಅಂದರೆ ಧ್ಯಾನ ಮತ್ತು ಹೆಚ್ಚು ಧ್ಯಾನ ಮಾಡುವುದರಿಂದ ಮತ್ತು ಸಕಾರಾತ್ಮಕರಾಗುವ ಪ್ರಯತ್ನಗಳಿಂದ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 & 4 | each 200/- |
| Thus Spoke Guruji Krishnananda - Vol 2 & 3 | each 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KRNA/BGE/1124/ 2020-2022
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



**ಗುರೂಜಿ ಕೃಷ್ಣಾನಂದ (1939 - 2012)**

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ತಪೋನಗರ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

**ಸಂ. ಶೋಭಾ ಕೆ. ರಾವ್; ಅನು: ಸ್ವರ್ಣಲತಾ**

ಇತ್ತೀಚೆಗೆ ಜೀವನದಲ್ಲಿ ಎದುರಿಸಿದ ಹೋರಾಟಗಳು, ಸವಾಲುಗಳು ಮತ್ತು ನನ್ನ ಸಾಧನೆ, ನನ್ನನ್ನು ಮತ್ತಷ್ಟು ವಿನಮ್ರಳನ್ನಾಗಿ ಹಾಗೂ ಮತ್ತಷ್ಟು ಶಾಂತಳನ್ನಾಗಿ ಮಾಡಿದೆ. ಯಾವುದನ್ನೂ ಹಗುರವಾಗಿ ತೆಗೆದುಕೊಳ್ಳದೆ ಅದನ್ನು ಎದುರಿಸಬೇಕು ಹಾಗೂ ಇದ್ದಕ್ಕಿದ್ದ ಹಾಗೆ ಜೀವನದಲ್ಲಿ ಕೆಳಗೆ ಬಿದ್ದಂತಹ ಸಂದರ್ಭಗಳಲ್ಲಿ ಗುರೂಜಿಯವರು ನಮಗೆ ಕಲಿಸಿರುವುದನ್ನು ಬುದ್ಧಿವಂತಿಕೆಯಿಂದ, ಸರಿಯಾದ ರೀತಿಯಲ್ಲಿ ಬಳಸಿಕೊಂಡು ಅದನ್ನು ಎದುರಿಸಬೇಕು. ನಾವು ಗುರೂಜಿಯವರ ಮಾತುಗಳಿಗೆ ಅಂಟಿಕೊಂಡರೆ ಅದು ಎಲ್ಲವನ್ನೂ ಸಾಧ್ಯವಾಗಿಸುತ್ತದೆ ಎಂಬುದು ನನ್ನ ಬಲವಾದ ನಂಬಿಕೆ.

– ವಿದ್ಯಾ ವೀರ್ಕರ್

ದೇವರ ಇಚ್ಛೆಗೆ ಶರಣು ಹೋಗಬೇಕು ಎಂಬುದು ನನ್ನ ಬಲವಾದ ನಂಬಿಕೆ ಮತ್ತು ಅದನ್ನು ಒಪ್ಪಿಕೊಳ್ಳಬೇಕು. ನನ್ನ ಸುತ್ತಮುತ್ತಲಿನವರಿಗೆ ಒಳಿತು ಮಾಡುವುದು ನನ್ನ ಕರ್ತವ್ಯ ಎಂದೆನಿಸಿದೆ. ಯಾವಾಗಲೂ ಉಲ್ಲಾಸದಿಂದಿದ್ದು, ಸಕಾರಾತ್ಮಕವಾಗಿ ನನ್ನ ಸಾಧನೆಗೆ ಬದ್ಧಳಾಗಿದ್ದು, ಪ್ರಶಾಂತವಾಗಿದ್ದು, ಸಾಧನೆಗೆ ಹೆಚ್ಚು ಒತ್ತುಕೊಡುವುದು ಒಳ್ಳೆಯದೆನಿಸಿದೆ. ಏನೇ ಬಂದರೂ ಸಹಾಯ, ಮಾರ್ಗದರ್ಶನ, ಸಫಲತೆ, ಅಸಫಲತೆ ಎಲ್ಲವನ್ನೂ ನನ್ನ ಹೃದಯದಲ್ಲಿರುವ ಭಗವಂತ ತನ್ನ ಆಟದಂತೆ ನಡೆಸುವನು. ಅವನ ಕೈಯಲ್ಲಿ ನಾನೊಂದು ಉಪಕರಣ, ಮತ್ತು ಭಗವಂತ ನನ್ನ ಮೂಲಕ ಜೀವನದ ಆಟವಾಡುತ್ತಿದ್ದಾನೆ.

– ರೆಬೋನಿ ರಾಯ್

ಇತ್ತೀಚೆಗೆ ನಾನು ೦ಯಾವುದಕ್ಕೂ ತಕ್ಷಣ ಪ್ರತಿಕ್ರಿಯಿಸದೆ ಸ್ವಲ್ಪ ನಿಧಾನಿಸುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ನಾನು ಕೆಲಸ ಮಾಡುವ ಸ್ಥಳದಲ್ಲಿ ಅನೇಕರಿಗೆ ಕಷ್ಟವಾಗಿದ್ದರೂ, ಯಾವುದೋ ಒಂದು ಶಕ್ತಿ ನನ್ನನ್ನು ಮಾರ್ಗದರ್ಶಿಸಿ, ಭರವಸೆ ತುಂಬುತ್ತಿದೆ.

– ದೀಪ್ತಿ ರಾಘವೇಂದ್ರ

ಪ್ರತಿಸಲ ನಾನು ಆಂತರಿಕ ಕ್ಷೋಭೆಗೊಳಗಾದಾಗಲೆಲ್ಲಾ ಶಾಂತವಾಗಿದ್ದು ಗುರೂಜಿಯವರ ಸಹಾಯ ಪಡೆಯಬೇಕೆನಿಸಿದಾಕ್ಷಣ, ಅದನ್ನು ಎದುರಿಸುವ ಶಕ್ತಿ ಬರುತ್ತದೆ. ಈ ವರ್ಷ ನನ್ನ ಅಂತರಂಗದಲ್ಲಿ ಅನೇಕ ಬದಲಾವಣೆಗಳಾಗಿವೆ. ಹೆಚ್ಚು ಶಾಂತವಾಗಿದ್ದು, ಬೇರೆಯವರ ಬಗ್ಗೆ ಸಭ್ಯವಾಗಿ ವರ್ತಿಸಿ ಸಹಾಯ ಮಾಡುವ ಗುಣ ಹೆಚ್ಚಾಗಿದೆ. ನನಗೆ ಹಣಕಾಸಿನ ತೊಂದರೆಯಾದಾಗ ಎಲ್ಲಿಂದ ಸಹಾಯ ದೊರೆಯಬಹುದೆಂದು ತಿಳಿದಿರಲಿಲ್ಲ. ಋಷಿಗಳು ಹಾಗೂ ಗುರೂಜಿಯವರನ್ನು ಪ್ರಾರ್ಥಿಸಿದಾಗ, ಮರುದಿನ ಬಹಳ ಹಿಂದೆ ನನ್ನಿಂದ ಸಹಾಯ ಪಡೆದಿದ್ದ ನನ್ನ ಸ್ನೇಹಿತರೊಬ್ಬರು, ನಾನು ಕೇಳದೆಯೇ ಪೂರ್ತಾ ಹಣವನ್ನು ಹಿಂದಿರುಗಿಸಿದರು. ಋಷಿಗಳು ಹಾಗೂ ಗುರೂಜಿಯವರು ಯಾವಾಗಲೂ ನನ್ನನ್ನು ಮಾರ್ಗದರ್ಶಿಸುವರೆಂಬ ಅನುಭವವಾಗಿದೆ. ನನ್ನ ಜೀವನದ ಪ್ರತಿಯೊಂದು ಘಟನೆಗಳಿಗೂ ನಾನು ಅವರಿಗೆ ಕೃತಜ್ಞನಾಗಿದ್ದೇನೆ ಹಾಗೂ ಅವರಲ್ಲಿ ನನ್ನ ನಂಬಿಕೆ ಹೆಚ್ಚಾಗಿ, ಅವರೊಡನಿರುವ ಸಂಪರ್ಕವನ್ನು ನಾನು ಗ್ರಹಿಸಬಲ್ಲವನಾಗಿದ್ದೇನೆ.

– ಪ್ರೇಮ್ ಆನಂದ್

ಧ್ಯಾನವು ನನಗೆ ಸಹನೆಯ ಶಕ್ತಿಯನ್ನು ಕಲಿಸುತ್ತದೆ. ಇದು ನನಗೆ ಬೇರೆಯವರ ಬಗ್ಗೆ ಏನನ್ನೂ ಭಾವಿಸದೆ, ಯಾವ ತೀರ್ಮಾನಕ್ಕೂ ಬರದಂತೆ ಎಂತಹ ಸಂದರ್ಭವನ್ನಾದರೂ ವಿಶ್ಲೇಷಿಸುವ ಜಾಣ್ಮೆಯನ್ನು ಕೊಟ್ಟಿದೆ. ಎಲ್ಲೆಲ್ಲೂ ತುಂಬಿರುವ ಬೆಳಕಿಗೆ ಶರಣಾಗಲು ನನ್ನ ಧ್ಯಾನ ಸಹಾಯ ಮಾಡಿದೆ. ಧ್ಯಾನ ನನ್ನೊಳಗಿನ ಪ್ರಶಾಂತತೆಯನ್ನು ಅರಿಯುವಂತೆ ಮಾಡುತ್ತದೆ.

– ಸುಲೋಚನಾ ರಾಮಸ್ವಾಮಿ

ಈಗ ನಾನು ಯಾವಾಗಲೂ ಶಾಂತತೆಯಿಂದ ಇರಲು ಸಾಧ್ಯವಾಗಿದೆ. ಋಷಿಗಳ ಅನುಗ್ರಹ ನನಗೆ ತಿಳಿಯುತ್ತಿದೆ. ಅವರಿಗೆ ನಾನು ಅತ್ಯಂತ ಋಣಿಯಾಗಿದ್ದೇನೆ. ನನ್ನ ಯೋಚನೆಗಳನ್ನು ವೀಕ್ಷಿಸಿ ಸಕಾರಾತ್ಮಕವಾಗಿರಲು ಸಾಧ್ಯವಾಗಿದೆ.

– ಎಸ್ ಜ್ಯೋತಿ

ಅಮರಾಜಿಯವರ ಭಾವಚಿತ್ರವನ್ನು ನೋಡಿದಾಕ್ಷಣ ಅಥವ ಅವರನ್ನು ನೆನೆದಾಗ ನನ್ನ ದೇಹದಲ್ಲಿ ಪ್ರಬಲವಾದ ಕಂಪನದ ಅನುಭವವಾಗುತ್ತದೆ.

– ಜ್ಯೋತಿಕಾ ಥಕ್ಕರ್

ಸನ್ನಿವೇಶಗಳನ್ನು ನಿಭಾಯಿಸುವ ನನ್ನ ದಿನ ನಿತ್ಯದ ಹೋರಾಟ ಸುಧಾರಿಸುತ್ತಿದೆ. ಆಗುತ್ತಿರುವ ಏರಿಳಿತಗಳ ಅನುಭವದಿಂದ ಬಹಳ ಕಲಿಯುತ್ತಿದ್ದೇನೆ.

– ಪ್ರದ್ನ್ಯಾ ವೈಕರ್

ಈಗ ನನಗೆ ಮನಃಶಾಂತಿ ಹಾಗೂ ಸಂತೋಷ ಸಿಕ್ಕಿದೆ. ಪ್ರತಿ ದಿನ ನಾನು ಮಾಡಿದ್ದೆಲ್ಲವನ್ನೂ ಆತ್ಮಪರೀಕ್ಷೆ ಮಾಡಿಕೊಂಡು ನನ್ನನ್ನು ನಾನು ಸರಿಪಡಿಸಿಕೊಳ್ಳುತ್ತೇನೆ. ಕೆಲವೊಮ್ಮೆ ನಕಾರಾತ್ಮಕ ವಿಚಾರಗಳು ಧ್ಯಾನದ ಸಮಯದಲ್ಲಿ ಹಾಗೂ ಬೇರೆ ಸಂದರ್ಭಗಳಲ್ಲಿ ತೊಂದರೆ ಕೊಡುತ್ತವೆ. ಇವುಗಳನ್ನೆಲ್ಲ ಮೀರಿ ಬೆಳೆಯಲು ಋಷಿಗಳ ಹಾಗೂ ಗುರೂಜಿಯವರ ಅನುಗ್ರಹದಿಂದ ಪ್ರಯತ್ನಿಸುತ್ತಿದ್ದೇನೆ.

ಋಷಿಗಳು ಹಾಗೂ ಗುರೂಜಿಯವರಿಂದ ನನಗೆ ಬಹಳ ಸಹಾಯ ಸಿಗುತ್ತಿದೆ.

– ವಿ ಹರಿಕೃಷ್ಣ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ